ಅಭಿಮನ್ಯು ಕಾಳಗದಲ್ಲಿ ಅಡಗಿರತಕ್ಕ ಪಾತ್ರಗಳ ವಿವರ

ಕೌರವೇಶ್ವರ
ದ್ರೋಣಾಚಾರ್ಯರು
ಜಯದ್ರಥ (ಸೈಂಧವ)
ಸಮಸಪ್ತಕರು
ಚಾರಕರು (ಸಮಸಪ್ತಕರ ಕಡೆ)
ಅರ್ಜುನ
ಚಾರಕರು
(ದ್ರೋಣಾಚಾರ್ಯರ ಕಡೆ)
ಶ್ರೀಕೃಷ್ಣ
ಧರ್ಮರಾಯ
ಅಭಿಮನ್ಯು
ಸುಭದ್ರೆ

ಪುರಸ್ತ್ರೀಯರು
ಅಭಿಮನ್ಯುವಿನ ಸಾರಥಿ
ಕರ್ಣ
ಶಲ್ಯ
ಕೃಪಾಚಾರ್ಯರು
ದುಶ್ಶ್ಯಾಸನ
ವೃಷಧ್ವಜ
ಭೀಮಸೇನ
ಲಕ್ಷ್ಮಣಾದಿಗಳು
ದುಶ್ಶ್ಯಾಸನನ ಮಗ
ದೇವೇಂದ್ರ
ಅಪ್ಸರಸ್ತ್ರೀಯರು

ಸೈಂಧವನ ವಧೆಯಲ್ಲಿ ಅಡಗಿರತಕ್ಕ ಪಾತ್ರಗಳ ವಿವರ

ಧರ್ಮರಾಯ
ಸುಭದ್ರೆ
ವೇದವ್ಯಾಸ
ಶ್ರೀಕೃಷ್ಣ
ಅರ್ಜುನ
ಚಾರಕರು (ಕೌರವನ ಕಡೆ)
ಜಯದ್ರಥ (ಸೈಂಧವ)

ಕೌರವೇಶ್ವರ
ದ್ರೋಣಾಚಾರ್ಯರು
ಶ್ರುತಾಯುಧ
ಸಾತ್ಯಕಿ
ಭೀಮಸೇನ
ಕೌರವನ ಸಹೋದರರು
ಕರ್ಣ

ಭೂರಿಶ್ರವ

ಶ್ರೀ





॥ ಶ್ರೀಗೋಪಾಲಕೃಷ್ಣಾಯ ನಮಃ ॥

ಶ್ರೀಮನ್ಮಹಾಭಾರತದೊಳಗಣ

ಯಕ್ಷಗಾನ ಅಭಿಮನ್ಯುಕಾಳಗ

ಶಾರ್ದೂಲವಿಕ್ರೀಡಿತಂ

ಶ್ರೀಪದ್ಮಾಸನಪೂಜಿತಾಂಘ್ರಿಕಮಲಂ ಸದ್ವಾಯುಪುತ್ರಪ್ರಿಯಂ
ಆಪದ್ಬಾಂಧವಮಿಂದಿರೇಶಮತುಳಂ ಆನಂದತೀರ್ಥಾರ್ಚಿತಮ್ ।
ಪಾಪಾಂಭೋಧಿಘಟೋದ್ಭವಂ ಶುಭಕರಂ ಪಂಕೇಜನೇತ್ರಂ ಹರಿಂ
ಗೋಪಾಲಂ ಗುಣಸಾಗರಂ ಗಿರಿಧರಂ ಧ್ಯಾಯಾಮಿ ಕೃಷ್ಣಂ ಸದಾ ॥

ರಾಗ ನಾಟಿ ಝಂಪೆತಾಳ

ಜಯ ಮಹಾ ಗಣನಾಥ । ಜಯ ರಾಮಸುಪ್ರೀತ । ಜಯತು ಸದ್ಗುಣಯೂಥ । ಜಯ ಬಹುಖ್ಯಾತ ॥ ಜಯತು ಜಯ ಜಯತು ॥ ಪ ॥ ಗಜನಿಭಾಕೃತಿವದನ । ಘನಯೋಗಿಹೃತ್ಸದನ । ಅಜಮುಖ್ಯಸುರನಮಿತ । ನಿಖಿಳಗುಣಭರಿತ ॥ ಭುಜಗಭೂಷಣ ದೇವ ಭುವನಜನಸಂಜೀವ । ತ್ರಿಜಗದೀಶಾನಂತ । ವರ ಏಕದಂತ ॥ ಜಯತು ಜಯ ಜಯತು ॥ ೧ ॥ ವಿಘ್ನಭುಜಗಸುಪರ್ಣ । ವಿಮಲ ಶೂರ್ಪಕರ್ಣ । ವಿಘ್ನವಿಪಿನಕುಠಾರ । ವಿಶ್ವಾಕಾರ ॥ ವಿಘ್ನಗಜಜೀಮೂತ । ವಿದಳಿತಾಘವ್ರಾತ । ವಿಘ್ನರಾಜ ಮುಕುಂ... ಸಕಲ ಗುಣವೃಂದ ॥ ಜಯತು ಜಯ ಜಯತು ॥ ೨ ॥ ಶರಪುರಸ್ಥಿರ... ಶರಭಲಿಂಗೋಲ್ಲಾಸ । ಕರಧೃತಮಹಾಪಾಶ । ಕಲುಷಾಬ್ಧಿನಾಶ ॥ ... ಪರಿಪಾಲ । ನಿರತ ಗಾನವಿಲೋಲ । ವರದ ಶ್ರೀವಿ[illegible]ತಜನಪೋಷ ॥ ಜಯತು ಜಯ ಜಯತು ॥ ೩ ॥

ರಾಗ ಸೌರಾಷ್ಟ್ರ ಅಷ್ಟತಾಳ

ಕ್ಷೀರಸಾಗರಕನ್ಯೆ ಲೋಕಪ್ರಸನ್ನೆ ಶ್ರೀ । ಲಕ್ಷ್ಮೀದೇವಿ । ಮುದ್ದು । ನಾರಾಯಣನುರಚಿಹ್ನೆ ಸನ್ಮೋಹನ್ನೆ । ಲಕ್ಷ್ಮೀದೇವಿ ॥ ಭೂರಿ ಸನ್ಮತಿ ಭಾಗ್ಯವಿತ್ತೆನ್ನ ರಕ್ಷಿಸೆ । ಲಕ್ಷ್ಮೀದೇವಿ । ಬಂದು । ಸೇರಿದೆ ನಿನ್ನಯ ಪಾದ ಪದ್ಮಂಗಳ । ಲಕ್ಷ್ಮೀದೇವಿ ॥ ೧ ॥

ವಾರ್ಧಿಕ

ವರ ಮಹಾಬ್ರಹ್ಮಾಣಿಯಂ ಭುಜಗವೇಣಿಯಂ । ತರಣಿಶತಸಂಕಾಶಿಯಂ ಸುಜನಪೋಷೆಯಂ । ಸುರುಚಿರಾಲಂಕಾರೆಯಂ ಶುಭಶರೀರೆಯಂ ಧೀರೆಯಂ ಗುಣಸಾರೆಯಂ ॥ ಶರದಿಂದುನಿಭವಕ್ತ್ರೆಯಂ ಘನಚರಿತ್ರೆಯಂ । ದುರಿತಸಂತತಿಶಮನೆಯಂ ದ್ವಿರದಗಮನೆಯಂ । ಸರಸವಿದ್ಯಾರೂಪೆಯಂ ಸತ್ಕಲಾಪೆಯಂ ನುತಿಸಿ ಮತಿಯಂ ಪಡೆವೆನು ॥ ೧ ॥ ಶಶವದನಮುದಭಂಗನಂ ಸುವಜ್ರಾಂಗನಂ । ಅಸಮಕೀರ್ತಿಕಲಾಪನಂ ರೌದ್ರರೂಪನಂ । ಅಸುರ ಕುಲವಿಧ್ವಂಸನಂ ಪರಮಹಂಸನಂ ಶಾಂತನಂ ಹನುಮಂತನಂ ॥ ವಸುದೇವ ಜಾಧೀನನಂ ಭೀಮಸೇನನಂ। ಋಷಿಕುಲಶಿರೋರನ್ನನಂ ಸುಮತಿಪೂರ್ಣನಂ। ಎಸೆವ ಮಧ್ವಾಚಾರ್ಯನಂ ಗುರುಕುಲಾರ್ಯನಂ ನೆನೆದು ಕೃತಿಯಂ ಪೇಳ್ವೆನು ॥ ೨ ॥ ಗಿರಿಜಾವಿಲೋಲನಂ ಶರಣುಜನಪಾಲನಂ । ತರಣಿಶತ ಭಾಸನಂ ಕರಿಚರ್ಮವಾಸನಂ । ಉರಗೇಂದ್ರಹಾರನಂ ದುರಿತೌಘದೂರನಂ ತ್ರ್ಯಕ್ಷನಂ ಸ್ಮರಶಿಕ್ಷನಂ ॥ ಹರಿಣಾಂಕಚೂಡನಂ ವರವೃಷಭರೂಢನಂ । ಗುರುಕುಲೋತ್ತುಂಗನಂ ಗಂಗೋತ್ತಮಾಂಗನಂ । ಶರಪುರಾಧೀಶನಂ ಶರಭ ಲಿಂಗೇಶನಂ ಸ್ಮರಿಸಿ ಮತಿಯಂ ಪಡೆವೆನು ॥ ೩ ॥

ಭಾಮಿನಿ

ಅಜ ಭವಾದಿ ಸಮಸ್ತ ದಿವಿಜ । ವ್ರಜಕೆ ತಲೆವಾಗುತಲಿ ವಾಣಿಯ । ಭಜಿಸಿ ಭಕ್ತಿವಿಶೇಷದಲಿ ವ್ಯಾಸರನು ಕೊಂಡಾಡಿ ॥ ನಿಜಗುರು ಮರುತ್ಸುತನ ಹೃತ್ಸರ । ಸಿಜದಿ ಧ್ಯಾನಿಸಿ ಗೌರಿಪಾದಾಂ । ಬುಜಕೆ ಮಣಿವುತ ಕವಿಜನರ ನಾರಾಧಿಸುವೆ ಬಿಡದೆ ॥ ೧ ॥

ಕಂದ

ಶ್ರೀಮತ್ಕುಡುಮಪುರೀಶಂ । ಸಾಮಜದನುಜಹರಂ ಸರ್ವಾರ್ಥಪ್ರದಾತಂ ॥ ಕಾಮಿತಫಲವಿಂದೆಮಗಂ । ಪ್ರೇಮದೊಳಿತ್ತಪುದು ಮಂಜುನಾಥನೆ ದಯದಿಂ ॥ ೧ ॥

ದ್ವಿಪದಿ

ಗುರುವಾದಿರಾಜಸ್ವಾಮಿಗಳಡಿಯ ಭಜಿಸಿ । ವರಪುರಂದರದಾಸರಂಘ್ರಿಗಳ ಸ್ಮರಿಸಿ ॥ ೧ ॥ ಭೂರಿ ಗ್ರಂಥಗಳಲಿ ವಿಶೇಷದಿಂ ಮೆರೆವ । ಭಾರತಪುರಾಣದಿ ಕಿರೀಟಿಸುತನೆನುವ ॥ ೨ ॥ ಅಭಿಮನ್ಯು ಚಕ್ರವ್ಯೂಹವ ಪೊಕ್ಕ ಕಥೆಯ । ಅಭಿವರ್ಣಿಸುವೆನು ಮೇಲಾದ ಸಂಗತಿಯ ॥ ೩ ॥ ಕನ್ನಡದ ನುಡಿಗಳಿಂದೆಕ್ಷಗಾನದಲಿ । ವರ್ಣಿಸುವೆ ಮಧ್ವಪತಿ ಕೃಷ್ಣನೊಲುಮೆಯಲಿ ॥ ೪ ॥ ಕೇಳಿ ಕವಿಜನರು ತಪ್ಪಿರಲು ತಿದ್ದುವುದು । ಶೀಲ ಗುಣನಿಧಿಗಳವಧರಿಸಿ ಮೆರೆಸುವುದು ॥ ೫ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ದಯದಿ ವೈಶಂಪಾಯ ಜನಮೇ । ಜಯಗೆ ಭಾರತಕಥೆಯನೊಲಿದತಿ । ನಯದಿ ವರ್ಣಿಸುತಿರಲು ಕೇಳುತ । ಪ್ರಿಯದೊಳೆಂದ ॥ ೧ ॥ ಯತಿಕುಲೋತ್ತಮ ಕೇಳು ಪಾರ್ಥನ । ಸುತನು ನಿರುಪಮ ಚಕ್ರವ್ಯೂಹದೊ । ಳತಿರಥರೊಳವನೆಂತು ಕಾದಿದ । ವಿತರಣದಲಿ ॥ ೨ ॥ ಚಂಡಭುಜಬಲ ಸೈಂಧವನ ತಲೆ । ಗೊಂಡನೆಂತು ಧನಂಜಯನು ಶ್ರೀ । ಪುಂಡರೀಕಾಕ್ಷನ ಚರಿತ್ರೆಯ । ಕಂಡುದುಸಿರೈ ॥ ೩ ॥ ಎಂದು ಭಕ್ತಿಯೊಳರಸನೆನಲಾ । ನಂದದಲಿ ಭೂಪತಿಯ ತಳ್ಕಿಸಿ । ಸಿಂಧುಶಯನನ ನೆನೆದು ಪೇಳ್ದನುಮು । ನೀಂದ್ರ ಮುದದಿ ॥ ೪ ॥

ರಾಗ ಭೈರವಿ ಝಂಪೆತಾಳ

ರಾಜಾಧಿರಾಜ ಜನ । ಮೇಜಯನೆ ಕೇಳೈ ಸ । ರೋಜಾಕ್ಷ ಕಥೆ ಕಲ್ಪ । ಭೂಜ ಸಜ್ಜನಕೆ ॥ ೧ ॥ ದುರಿತಾಂಬುನಿಧಿಯನು । ತ್ತರಿಸುವಡೆ ನಾನಿದ । ನ್ನೊರೆವೆ ನಿಮ್ಮವರ ಶುಭ । ಚರಿತೆಗಳನೆನಲು ॥ ೨ ॥ ಹರಿಚಮತ್ಕೃತಿಯಿಂದ । ಧುರದಿ ಭೀಷ್ಮನನು ಸಲೆ । ಸರಳಮಂಚವ ಮಾಡಿ । ನರನು ಮಲಗಿಸಲು ॥ ೩ ॥ ಸುರನದಿಯ ಸುತನ ಕಂ । ಡರಿಭಯಂಕರ ದ್ರೋಣ । ಗಿರದೆ ಪಟ್ಟವ ಕಟ್ಟಿ । ಕುರುರಾಯನಿರಲು ॥ ೪ ॥ ವರ ದ್ರೋಣ ಧರ್ಮಜನ । ಸೆರೆವಿಡಿಯೆ ಬಳಿಕ ಸಂ । ಗರದಿ ಹರಿ ಬಿಡಿಸಿಕೊಂ । ಡರಿಭಟರ ಗೆಲಿದ ॥ ೫ ॥ ಇಂತಚ್ಯುತನ ದಯದಿ । ಕೌಂತೇಯರಿರಲಿತ್ತ । ಚಿಂತಿಸಿದ ಕುರುರಾಯ । ನಂತರಂಗದಲಿ ॥ ೬ ॥

ರಾಗ ಸಾವೇರಿ ರೂಪಕತಾಳ

ಏನ ಮಾಡಲಿ ನಾನು ಪಾಂಡವರನು ಸೋಲಿಪಡೆ । ದಾನವಾಂತಕ ನವರ್ಗೆ ಸಾರಥಿಯಾಗಿಹನು ॥ ಏನ ॥ ಪ ॥ ಬಲರಾಮನಿಹನೆಂದು ಬಹಳ ಧೈರ್ಯವ ತಾಳ್ದೆ । ನಿಳೆಯ ಪ್ರದಕ್ಷಿಣೆಯಾಯ್ತುವಗಂದು ॥ ಏನ ॥ ೧ ॥ ಛಲದಂಕ ಭೀಷ್ಮಂಗೆ ಸರಳ ಮಂಚವದಾಯ್ತು । ಬಿಲುಮುರಿದು ವಿದುರನು ಮೊದಲೆ ಜಾರಿದನು ॥ ಏನ ॥ ೨ ॥ ಮೊದಲೊಂದು ಬಾರಿ ಕುಂಭದ ಕುವರನು ಕಟ್ಟಿದಡೆ । ಇದಿರಾಗಿ ಯಮಜನ ಯದುಪತಿ ಬಿಡಿಸಿದನು ॥ ಏನ ॥ ೩ ॥ ಇದರ ಮೇಲಿನ್ನು ಯತ್ನವ ಕಾಣೆ ಪಾಂಡವರ । ಕದನದಿ ಗೆಲುವಂಥ ಕಲಿಗಳಾರುಂಟು ॥ ಏನ ॥ ೪ ॥

ಭಾಮಿನಿ

ಧರೆಯಧಿಪ ಕೇಳಿಂತು ಕೌರವ । ರರಸ ಚಿಂತಾಭಾರದಲಿ ತರ । ಹರಿಸುತಿರಲಾ ವೇಳೆಯಲಿ ಕಲಶಜನು ನಡೆತಂದು ॥ ಅರುಹಿದನು ಬಲು ಕ್ಲೇಶಲತೆಯನು । ತರಿದು ಕಳೆ ಸಲೆ ಧೀರನಾಗಿರು । ಪರಿಕಿಸೆನ್ನ ಪರಾಕ್ರಮಾಂಕುಶವೊನೆಯ ನೀನೆಂದ ॥ ೧ ॥

ರಾಗ ಕಾಪಿ ಅಷ್ಟತಾಳ

ಕುರುಕುಲಾಗ್ರಣಿಯೆ ಕೇಳಯ್ಯ । ನಾಳೆ । ಪರಿಕಿಸಿ ನೋಡೆನ್ನ ಶೌರ್ಯದ ಬಗೆಯ ॥ ಕುರು ॥ ಪ ॥ ಅರ್ಜುನನೊಬ್ಬ ತಪ್ಪಿದರೆ । ಮಿಕ್ಕ । ಧೂರ್ಜಟಿ ಮೊದಲಾದವರೆನಗಿದಿರೆ ॥ ಊರ್ಜಿತ ಚಕ್ರವ್ಯೂಹವನು । ಮಾಡಿ । ಗರ್ಜಿಸಿ ಕಟ್ಟುವೆ ಧರ್ಮಪುತ್ರನನು ॥ ಕುರು ॥ ೧ ॥ ಉರಗಭೂಷನ ವರವುಂಟು । ಮತ್ತೆ । ಸರಿಯಾರು ಸೈಂಧವನೃಪನಿಗೆ ಗಂಟು ॥ ಸರಕುಮಾಡಲು ನಾಲ್ವರನು । ಕಾ । ದಿರುವನು ಚಕ್ರವ್ಯೂಹದ ದ್ವಾರವನು ॥ ಕುರು ॥ ೨ ॥

ವಾರ್ಧಿಕ

ಗರುಡಿಯಾಚಾರ್ಯನಿಂತೆಂದು ಘನಶೌರ್ಯಮಂ । ಕುರುರಾಯ ನೊಡನುಸಿರುತಾಕ್ಷಣವೆ ನಿಲಿಸಿದಂ । ಕರಿಘಟೆಗಳಂ ಶತಸಹಸ್ರಮಂ ರಥಗಳಯ್ವತ್ತುಸಾವಿರಗಳೊಡನೆ ॥ ತುರಗವಕ್ಷೋಹಿಣಿಗಳಂ ಸಾಲುಸಾಲಿನಿಂ । ವರಪದಾತಿಗಳಯ್ದು ಲಕ್ಷಮಂ ಪಂಙ್ಕ್ತಿಯಿಂ । ಪರುಠವಿಸಿ ಬಾಗಿಲೊಳಗಾ ಜಯದ್ರಥನ ನಿಲ್ಲಿಂದನಾ ದ್ರೋಣನಂದು ॥ ೧ ॥

ಭಾಮಿನಿ

ಅವನಿಪತಿ ಕೇಳಿಂತಬುಜವ್ಯೂ । ಹವನು ರಚಿಸಲು ಕಾಣುತಲಿ ಕೌ । ರವನು ಹಿಗ್ಗುತ ಬಳಿಕ ಪಾರ್ಥನ ತಪ್ಪಿಸುವ ಬಗೆಗೆ ॥ ತವೆ ನಿಧಾನಿಸಿ ಪೂರ್ವಕೃತ ಸ । ಖ್ಯವನು ಸಮಸಪ್ತಕರ ನೆನೆಯು । ಲ್ಕವರು ತಿಳಿದಾ ಕ್ಷಣವೆ ನಡೆತಂದರು ಸಗಾಢದಲಿ ॥ ೧ ॥

ಕಂದ

ಪೂರ್ವದ ಸಖರನು ಕಾಣುತ । ಲೂರ್ವೀಶ್ವರ ಸಂತಸಗೊಂಡಾ ಸನಕವರಂ ॥ ಸೇರ್ವಿಕೆಗಯ್ದಿಸಿ ಮನ್ನಿಸಿ । ಗೀರ್ವಾಣಾರಾತಿಗಳೊಳು ಕೇಳ್ದನು ವಿವರಂ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕ್ಷೇಮವೇ ಸಮಸಪ್ತಕರೆ ನಿಮ । ಗಾ ಮಹಾಪಾತಾಳಲೋಕದ । ಸೀಮೆಯೊಳು ತವ ನಾರಿಯರು ಪರಿ । ಣಾಮಿಸಿಹರೆ ॥ ೧ ॥ ಪುರಹರನ ಕಾರುಣ್ಯ ನಿಮ್ಮೊಳು । ಭರಿತವಾಗಿರುತಿಹುದೆ ಸಿರಿಯೊಳು । ಕೊರತೆಯಿಲ್ಲ ವಲಾಯೆನಲು ಕೇ । ಳ್ದೊರೆದರವರು ॥ ೨ ॥ ನಾವು ಸರ್ವರು ಕುಶಲಿಗಳು ಕುರು । ಭೂವರೇಂದ್ರನೆ ಹೋಗಲದು ನಿನ । ಗಾವರಿಸಿಕೊಂಡಿರುವ ದುಗುಡವಿ । ದಾವುದರುಹು ॥ ೩ ॥ ಇರುಳೊಳಿಂತವಸರದೊಳೆಮ್ಮನು । ಸ್ಮರಿಸಿದುದು ನೀ ದಾವ ಕಾರ್ಯವಿ । ದರುಹು ಬೇಗದೊಳೆನಲು ದೈತ್ಯೇ । ಶ್ವರರೊಳಿಂದ ॥ ೪ ॥

ರಾಗ ಕೇದಾರಗೌಳ ಝಂಪೆತಾಳ

ಕೇಳಿ ಪರಮಾಪ್ತರುಗಳು । ನಿಮ್ಮೊಡನೆ । ಪೇಳಲೇನೀ ವ್ಯಥೆಗಳು ॥ ಖೂಳ ಪಾಂಡವರೊಳೆನಗೆ । ದೊರೆಕೊಂಡ । ಕಾಳಗದಿ ಸೋತ ಬಗೆಗೆ ॥ ॥ ೧ ॥ ಮರುಗಿ ನಾ ಕಲಶಭವಗೆ । ಪೇಳ್ದರವ । ರೊರೆದರೊಂದಭಯವೆನಗೆ ॥ ನರ ನಾಳೆ ತಪ್ಪುವಂತೆ । ಗೆಯ್ದರೆಮ । ತರಳನಸು ಪಿಡಿವರಂತೆ ॥ ೨ ॥ ಆದರಿಂದಲಾ ಪಾರ್ಥನ । ಕರೆಸಿ ನೀ । ವೊದಗಿ ರಣದೊಳು ಧೂರ್ತನ ॥ ಸದೆವರಿದೆ ವೀಳ್ಯವೆನುತ । ಕೊಟ್ಟು ಹರು । ಷದಿ ಮನ್ನಿಸಿದನು ನಗುತ ॥ ೩ ॥

ರಾಗ ಭೈರವಿ ಏಕತಾಳ

ಭರದಿಂ ವೀಳ್ಯವ ಕೊಳುತ । ಹುಂ । ಕರಿಸಿ ಪರಾಕ್ರಮವೆನುತ ॥ ಕುರುರಾಯನಿಗರುಹಿದರು । ಭೀ । ಕರದಲಿ ಸಮಸಪ್ತಕರು ॥ ೧ ॥ ಗೋತ್ರಾರಿಯ ನಂದನಗೆ । ವೊಗ । ವೆತ್ತಲು ಬಿಡೆವೀ ಕಡೆಗೆ ॥ ಮತ್ತಾ

ನಾಲ್ವರ ಗೆಲಿದು । ನಿ । ನ್ನರ್ತಿಯ ಸಲಿಸಿಕೊ ಒಲಿದು ॥ ೨ ॥ ತಂದೆಯ ಕೊಂದಾತನನು । ಬಿಡೆ । ವೆಂದೆಂದಿಗು ವೈರವನು ॥ ಮುಂದಾಗುವ ಕಾರ್ಯವನು । ಮಾ । ಡೆಂದು ಕರೆದು ದೂತರನು ॥ ೩ ॥ ಕೇಳಿರೊ ಭಟರರ್ಜುನಗೆ । ನೀವ್ । ಪೇಳಿರೊ ಸಂಗರದೊಳಗೆ ॥ ನೀಲಾಂಗನ ಬಿಟ್ಟೀಗ । ಶಶಿ । ಮೌಳಿಯು ಕರೆಸಿಕೊ ಬೇಗ ॥ ೪ ॥ ಎಂದಾ ನರನೊಳು ನುಡಿದು । ನೀವ್ । ಕುಂದದೆ ಸೆರಗನು ಪಿಡಿದು ॥ ಮುಂದಲಸದೆ ಬಹು ದೆನುತ । ಬಲು । ಮುಂದಮುತಿಗಳಿರಲಿತ್ತ ॥ ೫ ॥

ಕಂದ

ಈ ತೆರವೆಂದುದ ಕೇಳ್ದಾ । ದೂತರು ನಡೆತಂದರ್ಜುನನಿದಿರೊಳ್ ಭರದಿಂ ॥ ಭೀತಿಯನುರೆ ಬಿಟ್ಟಾಗಲ್ । ಕಾತರದಿಂದುಸಿರಿದರೊಡೆಯರ್ ಬೆಸಸಿದುದಂ ॥ ೧ ॥

ರಾಗ ಮುಖಾರಿ ಏಕತಾಳ

ಲಾಲಿಸಿ ಕೇಳಿಂದ್ರಸಂಜಾತ । ಆಲಸ್ಯ ಮಾಡ । ದೇಳು ಸಂಗರಕೆ ಲೋಕಖ್ಯಾತ ॥ ಪ ॥ ನಂದಗೋಪಜನ ಬಿಟ್ಟು ಬೇಗ । ಕರೆಸಿಕೊ ಧುರ । ಕಿಂದುಮೌಳಿಯು ಬೆಂಬಲಕೀಗ ॥ ಇಂದು ರಣಾಗ್ರದಿ ಬದುಕಿದರಿಲ್ಲು ನೀ । ನೆಂದೆಂದಿಗು ಬದುಕಿದೆಯೈಸ್ಸೆ ಗಡ । ಮುಂದಪ್ಪುದ ಶಿವನೊಬ್ಬನೆ ಬಲ್ಲ । ನಿಂದಿರು ನಿಂದಿರು ಧೈರ್ಯವ ಕುಂದದೆ ॥ ೧ ॥ ಗೋವಳ ಸಾರಥಿ ನಿನ್ನ ರಥಕೆ । ಅಡವಿಗಳಲ್ಲಿ । ಜೀವಿಪ ಕಪಿಯು ನಿನ್ನ ಧ್ವಜಕೆ ॥ ಈ ವಿಧಿ ಯೇನೆಂಬೆವು ನಡೆ ನಡೆ ರಣ । ಕೋವಿದರಿಹರೆಮ್ಮಲ್ಲಿ ನೀನವರೊಳು । ಜೀವಿಸಿ ಧರೆ ನಿನ್ನವ್ವೆಗೆ ಕುವರನು । ಭಾವಿಸೆನುತ ಮಿಗೆ ಹಿಡಿದರು ಸೆರಗ ॥ ೨ ॥

ಭಾಮಿನಿ

ಚರರ ನುಡಿಯನು ಕೇಳಿ ನಗುತಲೆ । ನರನು ಪೇಳಿದನೊಲವಿನಿಂದಲಿ । ಬರುವೆವೈ ಸಂಗರಕೆ ಬೇಕಾದವರನೊಡಗೊಂಡು ॥ ಭರದಿ ನಿಮ್ಮೊಡೆಯರಿಗೆ ಸೂಚಿಸಿ । ತೆರಳಿ ನೀವೆಂದವರ ಕಳುಹಲು । ಶರದ ಪಂಡಿತನಾಳ್ಗಳೈತಂದೊರೆ ದರರ್ಜುನಗೆ ॥ ೧ ॥

ರಾಗ ಸಾರಂಗ ಅಷ್ಟತಾಳ

ಕೇಳು ಧರ್ಮಾನುಜಾತ । ಸಂಗರಕೆ ಬೇ । ಗೇಳು ಮೂಲೋಕ ಖ್ಯಾತ ॥ ಪ ॥ ಕಲಿಘಟೋತ್ಕಚಗರಿದು । ಭೀಮನಿಗಸ । ದಳವಾಗಿ ತೋರು

ವುದು ॥ ಒಳಹೊಗಲರಿದು ಮಾದ್ರೇಯರಿಗಿಂದಿನ । ನಳಿನವ್ಯೂಹದ ಕೋಟೆಯಾ ಬಲು ಸೇನೆಯು ॥ ೧ ॥ ಶಿವನೊಳ್ ಬೇಡಿದ ಶರವ । ನೀ ತೆಗೆ ಗಾಂಡೀ । ವವ ಮಿಗೆ ಕುಲದೈವವ ॥ ತವಕದಿ ಬೇಡಿಕೊ ಅವರಿವರಂತಲ್ಲ । ಅವಗಡಿಸಲು ಗುರುವಿಂಗಿದಿರ್ ಯಾರುಂಟು ॥ ೨ ॥

ಭಾಮಿನಿ

ಅರಸ ಕೇಳಿಂತೆನುತ ದೂತರು । ಜರೆದು ನುಡಿಯಲ್ಕವರ ಕಳುಹಿಸಿ । ಧುರಕೆ ತೆರಳುವುದಾವ ದೆಸೆಗೆಂದೆನುತ ಮನ್ಮನದಿ ॥ ಸುರಪನಂದನ ಯೋಚಿಸುತ ನಿ । ರ್ಧರಿಸಲಾರದೆ ಬಂದು ವಿನಯದಿ । ಕರವ ಮುಗಿದಸುರಾಂತಕನಿಗರುಹಿದನು ಭಕ್ತಿಯಲಿ ॥ ೧ ॥

ರಾಗ ದೇಶಿ ಏಕತಾಳ

ಕೇಳಯ್ಯ ನಾನೆಂಬ ನುಡಿಯ । ವಾಸುದೇವ । ಈಗ । ಪೇಳುವೆನೊಂದಾಲೋಚನೆಯ । ವಾಸುದೇವ ॥ ೧ ॥ ಮೊದಲು ಸಮಸಪ್ತಕರ ಚರರು । ವಾಸುದೇವ । ಕಲಹ । ಕೊಡಗಲುಸಿರಿ ಪೋದರಯ್ಯ । ವಾಸುದೇವ ॥ ೨ ॥ ವಿಕ್ರಮದೊಳು ಕುಂಭಜಾತ । ವಾಸುದೇವ । ಘೋರ । ಚಕ್ರವ್ಯೂಹದ ರಣಕೆ ಕರೆದ । ವಾಸುದೇವ ॥ ೩ ॥ ಭಾವ ನಿನ್ನ ಭಾವವೇನು । ವಾಸುದೇವ । ನಾವಿ ! ನ್ನಾವ ಕಡೆಗೆ ಪೋಪುದಯ್ಯ । ವಾಸುನೇವ ॥ ೪ ॥

ಪದ್ಯ

ಕದನೋದ್ಯೋಗವ ಬೆಸಗೊಳಲರ್ಜುನ । ಮುದದಿಂದಾತನ ಮನ್ನಿಸುತ ॥ ಪದುಮದಳಾಕ್ಷನು ಮನ್ಮನದಲಿ ಗ್ರಹಿ । ಸಿದನೀ ತೆರದೊಳು ನಸುನಗುತ ॥ ೧ ॥

ರಾಗ ಕಾಂಭೋಜ ಝಂಪೆತಾಳ

ಅಳಿಯನೀ ಮೋಹರದೊಳುಳಿದರಿನ್ನವಗೆ ಮುಂ । ದಳಿವಿಲ್ಲ ಕಲಿಯುಗದೊಳೆನುತ ॥ ತಿಳಿದು ಫಲುಗುಣಗೆಂದನೇಳು ಸಮಸಪ್ತಕರೊ । ಳಳವಿಗೊಡಲಿಂದು ಬೇಗದಲಿ ॥ ೧ ॥ ಖಳವಿದಾರಣ ಕೇಳು ಕಲಶಸಂಭವ ಗೆಯ್ದು । ನಳಿನವ್ಯೂಹಕೆ ಪೋಗಿ ರಣದಿ ॥ ಮಲೆತು ರಿಪುಗಳ ಗೆಲುವ ಕಲಿಗಳಾರಿಹರೆನಲು । ಜಲಜಾಕ್ಷನಿಂತೆಂದ ನರಗೆ ॥ ೨ ॥ ಬಗೆವನೇ ನಿನ್ನಯ ಕುಮಾರನೀ ಸಮರವನು । ತೆಗೆಯದೇತಕೆ ಭಂಡತನವು ॥ ಹಗಲರಸನಾರೋಗಣೆಗೆ ಸೊಡರು ಬೇಕೆ ಮಿಗೆ । ಖಗರಾಜನಂಜುವನೆ ಫಣಿಗೆ ॥ ೩ ॥ ಎಂದಾಗ

ಕಪಟನಾಟಕ ರಥವ ತಿರುಹುತಲಿ । ಬಂದನರ್ಜುನನನೊಡಗೊಂಡು ॥ ನಿಂದು ಸಮಸಪ್ತಕರೊಳಳವಿಯನುಕೊಟ್ಟನು ಪು । ರಂದರಾತ್ಮಜನು ಶೌರ್ಯದಲಿ ॥ ॥ ೪ ॥

ರಾಗ ಶಂಕರಾಭರಣ ಮಟ್ಟೆತಾಳ

ನರನು ಗಾಂಡೀವಧನುವ ಝೇಂಕರಿಸುತಲಿ । ಸರಳ ಮಳೆಯ ಕರೆದ ನಾಗ ಫಡ ಫಡೆನುತಲಿ ॥ ಸುರಪಸುತನ ಮಾರ್ಗಣಗಳ ತೆರವುತುಗ್ರದಿ । ದುರುಳ ಖಳರನೇಕಶರವ ಬಿಡಲು ಶೀಘ್ರದಿ ॥ ೧ ॥ ಅತುಳಬಲ ಕಿರೀಟಿಯುದನು ಕಡಿಯಲೆಂದರು । ಪಿತನು ಪೋದ ಠಾವ ನಿನಗೆ ತೋರ್ಪೆವೆಂದರು ॥ ಸುತರು ಪೋಪುದುಚಿತ ಜನಕರಿರುವ ಲೋಕವ । ಹಿತದಿ ತೋರ್ಪೆನೆನುತ ನರನು ಕವಿದನಸ್ತ್ರವ ॥ ೨ ॥ ಪಾರ್ಥಮೋಹನಾಸ್ತ್ರಕಿದಿರು ನಿಲ್ಲದಭಟರು । ಧಾತ್ರಿಗೊರಗಿ ನಿದ್ರೆಯಿಂದ ಬಳಲುತಿದ್ದರು ॥ ಮತ್ತೆ ಮೂದಲಿಸುತ ಕರೆದರಾ ರಣಾಗ್ರದಿ । ದೈತ್ಯರನ್ನು ಜರಿವುತಾಗ ಘನ ವಿಲಾಸದಿ ॥ ೩ ॥

ವಾರ್ಧಿಕ

ಹರಿಧನಂಜಯರತ್ತ ಕಾದುತಿರಲಿತ್ತ ಸಂ । ಗರಕೆ ಧೃಷ್ಟದ್ಯುಮ್ನ ಕಲಿಘಟೋತ್ಕಚ ನಕುಲ । ಧುರವಿಜಯ ಸಾತ್ಯಕಿ ವಿರಾಟ ಕುಂತೀಭೋಜ ಮುಖ್ಯರಾ ದುರ್ಗವನ್ನು ॥ ಮುರಿಯಲಾರದೆ ಗಾಯವಡೆದು ತಿರುಗುತ್ತಿರಲು । ಮರುತಜಂ ಕಾದಿ ಮರಳಿದನೆಂದು ಧರ್ಮಜಂ । ಬೆರಳ ಮೂಗಿನೊಳಿಟ್ಟು ಚಿಂತೆಯಂ ತಾಳಿ ತನ್ನೊಡನೆ ತಿಳಿದಿಂತೆಂದನು ॥ ೧ ॥

ಭಾಮಿನಿ

ಕಾಮಪಿತನಿದ ಬಲ್ಲನಾ ಬಲ । ರಾಮನರಿವನು ಪಾರ್ಥ ತಿಳಿವನು । ಭೂಮಿಯಲಿ ಸುರಪತಿಯ ಮೊಮ್ಮನು ಬಲ್ಲ ಹೋಗಲಿಕೆ ॥ ಕ್ಷೇಮದಲಿ ಬರಲರಿಯನವನೀ । ಸೀಮೆಯಲಿ ಮಿಕ್ಕವರ ಕಾಣೆನು । ಹಾ ಮಹಾದೇವೆನುತ ಚಿಂತಿಸುತಿರ್ದನವನೀಶ ॥ ೧ ॥

ರಾಗ ಮಾರವಿ ಏಕತಾಳ

ಇಂತು ಚಿಂತಿಸುವುದನರಿತಭಿಮನ್ಯು ಮ । ಹಾಂತ ಪರಾಕ್ರಮದಿ ॥ ನಿಂತು ಮುಂಗೈಸರಪಣಿಯನು ಸರಿಸುತ । ಪಂಥದಿ ಪಿತಗೆಂದ ॥ ೧ ॥ ಬೊಪ್ಪನೆ ಬಿಡು ಬಿಡು ಚಿಂತೆಯ ರಿಪುಗಳ । ಸೊಪ್ಪರಿವೆನು ಬಿಡದೆ ॥ ತಪ್ಪದೆ ಚಕ್ರವ್ಯೂಹವ ಪೊಕ್ಕಭಟರ । ನೊಪ್ಪಿಸುವೆನು ಯಮಗೆ ॥ ೨ ॥ ಬಲ್ಲೆನು

ನಾನಾ ವ್ಯೂಹದಿ ಸೆಣಸುವು । ದೆಲ್ಲ ಚಮತ್ಕೃತಿಯು ॥ ನಿಲ್ಲದೆ ವೀಳ್ಯವನೆನಗಿತ್ತು ಕಳುಹಿಸು । ತಲ್ಲಣಗೊಳದೀಗ ॥ ೩ ॥ ನೂರಿಗೆ ಹಬ್ಬವ ಮಾಡುವೆ ಕೌರವ । ವೀರರ ತಲೆಗಡಿದು ॥ ಸೂರೆಗೊಂಬೆ ನಿಮಿಷಾರ್ಧದಿ ದುರ್ಗವ । ಪೌರುಷ ನೋಡೆಂದ ॥ ೪ ॥

ಭಾಮಿನಿ

ವಸುಧೆಪತಿ ಕೇಳಾಗ ಧರ್ಮಜ । ಪಸರಿಸುವ ಚಿಂತೆಗಳ ಬಿಟ್ಟು । ಲ್ಲಸದಿ ಮಗುವನು ತೆಗೆದು ಬಿಗಿಯಪ್ಪುತಲೆ ಮುದ್ದಾಡಿ ॥ ಶಿಶುವು ನೀನೆಲೆ ಮಗನೆ ಸಂಗರ । ವಸದಳವು ಧುರಧೀರ ಷಡುರಥ । ರಿಸುಗೆಯನು ನೀನೆಂತು ಸೈರಿಸಲಾಪೆ ಹೇಳೆಂದ ॥ ೧ ॥

ರಾಗ ತೋಡಿ ಆದಿತಾಳ

ಮಗನೆ ಕೇಳ್ ಕಾಲಾಗ್ನಿಯ ಹೊಗಬಹುದಹಿಪನ । ಝುಗಝುಗಿಸುವ ಪೆಡೆಯೊಳು ನಲಿದಾಡಬಹುದು ॥ ವಿಗಡ ಮೃತ್ಯುವಿನ ಬಾಯೊಳು ಹೊಕ್ಕು ಬರಬಹುದು । ಪೊಗುವಡಸಾಧ್ಯವು ಚಕ್ರವ್ಯೂಹವನು ॥ ಎಂತು ಪೋಪೆಯೊ ಮಗನೆ ಚಕ್ರವ್ಯೂಹಕಿ । ನ್ನೆಂತು ಪೋಪೆಯೊ ಮಗನೆ ॥ ೧ ॥

ರಾಗ ಭೈರವಿ ಮಟ್ಟಿತಾಳ

ಬಿಡು ಬಿಡಾ ಮಹಾ । ಸಿಂಹರಾಜನ । ತುಡುಕಿ ಕರಿಗಳು । ಬಡುಕಲಾಪವೆ ॥ ತಡೆಯದೆನ್ನನು । ಕಳುಹಿ ಪರಿಕಿಸು । ಕೊಡನ ಕುವರನ । ಕುಟಿಲ ಕಾಂಬೆನು ॥ ೧ ॥

ರಾಗ ತೋಡಿ ಆದಿತಾಳ

ಕಂದ ಕೇಳಶ್ವತ್ಥಾಮ ಗುರು ಕೃಪಾದಿತ್ಯಸುತ । ರೊಂದಾಗಿರ್ಪರು ನವಗ್ರಹರೊಗ್ಗಾದಂತೆ ॥ ಇಂದುಧರನಿಗೊಳಪೊಕ್ಕು ಜೀವಿಸಲರಿದು । ಸಂದೇಹವುಂಟೆ ರಣ ಸಾಮಾನ್ಯವಲ್ಲ ॥ ಎಂತು ಪೋಪೆಯೊ ಮಗನೆ ॥ ೧ ॥

ರಾಗ ಭೈರವಿ ಮಟ್ಟಿತಾಳ

ಗಾಳಿ ಬೆವರುವು । ದುಂಟೆ ವಹ್ನಿಯು । ಜ್ವಾಲೆ ತುಹಿನಕೆ । ಬೆದರಿ ಪೋಪುದೆ ॥ ಬಾಲನೆಂದೆನ್ನ । ಚಿಂತೆ ಮಾಡದೆ । ಕಾಳಗಕ್ಕಿಂದು । ಕಳುಹಿ ಪರಿಕಿಸು ॥ ೧ ॥

ರಾಗ ತೋಡಿ ಆದಿತಾಳ

ಮಾಣದೆ ಭೀಮ ಬಂದಾ ನಕುಲ ಸಾತ್ಯಕಿಯರ । ಪ್ರಾಣ ಮಾತ್ರದಿ ಬಿಟ್ಟರರಿಭಟರಿಂದು ॥ ತ್ರಾಣವುಳ್ಳ ವಿರಾಟ ದ್ರುಪದರುವ್ಯೂಹವಲ್ಲಿ । ಕಾಣದೆಯಡಗಿತು ಕಾಳಗದೊಳಗೆ ॥ ಎಂತು ಪೋಪೆಯೊ ಮಗನೆ ॥ ೧ ॥

ರಾಗ ಭೈರವಿ ಮಟ್ಟೆತಾಳ

ಹಲವು ಪುಷ್ಪದ । ವಾಸನೆಗಳ । ಕೊಳಲು ಸಂಪಿಗೆ । ಯರಳ ಪರಿಮಳ ॥ ಅಳಿಕುಲಕ್ಕದು । ಪದ್ಮವಪ್ಪುದೆ । ತಿಳಿಯದೆನ್ನನು । ಕಣಕಿ ನೋಡಲಿ ॥ ೧ ॥

ಭಾಮಿನಿ

ಇಳೆಯರಸ ಕೇಳಿಂತು ಕುವರನ । ಛಲದ ನುಡಿಗುರಿ ಹಿಗ್ಗುತಲಿ ಬೆಂ । ಬಲಕೆ ಮೋಹರಸಹಿತ ಬಹೆವೆಂದಾಗ ಮೀಳೆಯುವ ॥ ಘಳಿಲನಿತ್ತಭಿ ಮನ್ಯುವೀರನ । ಕಳುಹಲಿಕ್ಕದ ಕಂಡು ದೂತಿಯು । ಬಲು ಭರದಿ ನಡೆ ತಂದು ಸೌಭದ್ರೆಯೊಳು ಪೇಳಿದಳು ॥ ೧ ॥

ರಾಗ ಸಾರಂಗ ಅಷ್ಟತಾಳ

ತಾಯೆ ನೀ ಲಾಲಿಸಮ್ಮ । ಬಿನ್ನಪವನ್ನು । ತಾಯೆ ನೀ ಲಾಲಿಸಮ್ಮ ॥ ತಾಯೆ ಲಾಲಿಸು ನಾನಿಂದೆಂಬ ವಾರ್ತೆಯ ಬಲು । ನ್ಯಾಯದಿಂ ಮೆರೆದಿರ್ಪ ತೋಯಜಾಕ್ಷಿಯೆ ಇಂದು ॥ ೧ ॥ ಮನಸಿನ ಕರೆಯೊಳ್ ನಿನ್ನ । ತನಯನು ಬಲು । ಘನದಾನಂದದಿ ತಾಳುತ್ತ ॥ ಧನುಶರಗಳನು ತಾ[illegible] ಗ್ರಹಿಸುತ । ರಿಪುವಿನೊಳ್ ಕಾದುವೆನೆನುತ ॥ ೨ ॥ ಕಾಲಜಗೊಂದಿಸುತ । ನೇಮವ ಕೊಂಡು । ಲೀಲೆಯಿಂದ್ಪೋಗುವನು ॥ ಖೂಳ ಕೌರವ ದ್ರೋಣಾದ್ಯರನೆಂತು ಗೆಲುವನೊ । ಬಾಳಲೋಚನ ಬಲ್ಲನು । ಇನ್ನೇನು ॥ ೩ ॥ ಎಂದ ದೂತಿಯ ಮಾತನು । ಕೇಳುತ್ತ ಗೋ । ವಿಂದನನುಜೆಯು ತಾನು ॥ ನೊಂದುಕೊಳ್ಳುತ ತನ್ನ ಕಂದನು ಇರ್ಪೆಡೆಗಾಗಿ । ಬಂದು ತಾನಿಂತೆಂದಳು । ಬೇಗದೊಳು ॥ ೪ ॥

ರಾಗ ಸಾವೇರಿ ಅಷ್ಟತಾಳ

ಮಗನೆ ನೀನಿಂದು ಮನದಿ ಖತಿಯಿಂದಲಿ । ಅಗಡುತನವ ತಾಳುತ್ತ ॥ ಬಗೆಬಗೆ ಧನುಶರವ ಕೈಯೊಳು ಕೊಂಡು । ಮಗುವೆ ನೀನಯ್ದುವುದೆಲ್ಲಿ ॥

॥ ೧ ॥ ತಂದೆಯು ತಾನಿಲ್ಲದ ವೇಳ್ಯದಿ ನೀನು । ಮಂದಮತಿಯು ತಾಳುತ್ತ ॥ ಒಂದು ಮಾತಾದರೆನ್ನೊಳು ಪೇಳದೆ ನೀನು । ಚಂದದಿಂದ್ಹೋಗುವೆಯು ॥ ೨ ॥ ದನುಜಮರ್ದನನು ತಾನು ಇಂದಿರೆ ನಿನ್ನ । ರಣಕೆ ಪೋಗಲು ಬಿಡುವನೆ ॥ ಮನದನುಮಾನವ ಬಿಟ್ಟು ನಿನ್ನಭಿಮತ । ವನು ಎನಗೀಗ ಪೇಳು ॥ ೩ ॥

ಪದ್ಯ

ಎಂದಾ ಜನನಿಯ ನುಡಿಯಂ ಕೇಳ್ದಾ । ನಂದನನತಿ ಹರುಷದಿ ತಾ ॥ ನೆಂದನು ತನ್ನಯ ಮನಸಿನ ಪರಿಯನು । ಚಂದಿರಮುಖಿ ಸೌಭದ್ರೆಯೊಳು ॥ ೧ ॥

ರಾಗ ಸೌರಾಷ್ಟ್ರ ಅಷ್ಟತಾಳ

ಲಾಲಿಪುದೆಲೆ ತಾಯೆ ಎನ್ನ ಬಿನ್ನಪವನು । ಅಮ್ಮ ಕೇಳು ॥ ಖೂಳ ಕೌರವ ನಮ್ಮ ಗೆಲಬೇಕೆಂದೆನುತಲಿ । ಅಮ್ಮ ಕೇಳು ॥ ೧ ॥ ತನ್ನ ಪಾಳ್ಯದಧಿಪತಿತ್ವ ಕುಂಭಜಗಿತ್ತನಂತೆ । ಅಮ್ಮ ಕೇಳು ॥ ಚಕ್ರವ್ಯೂಹವ ರಚಿಸಿದನಂತೆ ಕಲಶಜ । ಅಮ್ಮ ಕೇಳು ॥ ೨ ॥ ಗರುಡಿಯಾಚಾರ್ಯರ್ಗ ಮುಂತಾಗಿಹ ಸುಭಟರ । ಅಮ್ಮ ಕೇಳು ॥ ಬಲು ವಿಕ್ರಮದಿಂದಲ್ಲಿಗಯ್ದುವೆ ಬೇಗದಿಂ । ದಮ್ಮ ಕೇಳು ॥ ೩ ॥ ನೇಮವನಿತ್ತೆನ್ನ ಕಳುಹು ಸಂಪ್ರೀತಿಯಿಂ । ದಮ್ಮ ಕೇಳು ॥ ಎನ್ನ । ಕಾಮಜನಕನು ರಕ್ಷಿಸದಿರನಿಂದಿನೊ । ಳಮ್ಮ ಕೇಳು ॥ ೪ ॥

ಪದ್ಯ

ಈ ತೆರದಿಂದಭಿಮನ್ಯು ಪೇಳಲ್ಕಾತನ ನುಡಿಯಂ ಕೇಳ್ದಾ ಸೌಭದ್ರಾಂಗನೆಯು ॥ ಮಾತುಗಳಾಡದೆ ಶೋಕದಿ ಧರೆಯೊಳು ಬೀಳುತ ತಡೆಯದೆ ಕುವರನೊಳಿಂತೆಂದಳು ॥ ೧ ॥

ಭಾಮಿನಿ

ಎಲೆ ಮಗುವೆ ನೀನೆಲ್ಲಿಗಯ್ದುವೆ । ಛಲ ಪರಾಕ್ರಮವಿಡಿದು ಎನ್ನೊಳು । ತಿಳುಹು ಬೇಗದೊಳೆನಲುಸಿರ್ದನು ಕೊಳುಗುಳದ ಹದನ ॥ ಕಲಶಸಂಭವನಿಂದಿನಳವಿಗೆ । ಸಿಲುವ ಗಡ ಅತನ ಪರಾಕ್ರಮ । ನಿಲಿಸಿಬಿಡುವೆನು ನೋಡೆನುತ ಪದಕೆರಗುತೆಂತೆಂದ ॥ ೧ ॥

ರಾಗ ತೋಡಿ ಅಷ್ಟತಾಳ

ದ್ರೋಣನ ಗೆಲುವ ಪರಾಕ್ರಮಿಗಳು ನಮ್ಮ । ಸೇನೆಯೊಳ್ ಭಟರಿಲ್ಲ ॥ ನಾನದನೆಣಿಸುತ ಹೊರವಂಟೆ ನೋಡೆನ್ನ । ತ್ರಾಣದ ಪರಿಯನೆಲ್ಲ ॥ ೧ ॥

ಕಲಹದಿ ಕೌರವಕುಲವ ಸಂಹರಿಸುವೆ । ಗೆಲವಿನೊಳ್ ಕಳುಹೆನ್ನನು ॥ ಅಳವಿಯೊಳೆನ್ನಯ ಬಲ ಪರಾಕ್ರಮವನ್ನು । ಇಳೆಯೊಳು ಮೆರೆಸುವೆನು ॥ ೨ ॥ ಎನುತ ಸೌಮಿತ್ರಿಯೆಂದೆಂಬ ಸಾರಥಿಯನ್ನು । ಘನ ಬೇಗದಲಿ ಕರೆದು ॥ ಚಿನುಮಯನಂಘ್ರಿಯ ನೆನೆದು ಸ್ಯಂದನವೇರ । ಲನಿತರೊಳಿಂತೆಂದಳು ॥ ೩ ॥

ರಾಗ ಕಾಂಭೋಜ ಏಕತಾಳ

ಏತಕಿಂಥ ಬುದ್ಧಿ ಬಂತು । ಕಂದ ಕಂದ । ನಿನಗೆ । ಪ್ರೀತಿಯೇನೊ ಮರಣದೊಸಗೆ । ಕಂದ ಕಂದ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಬಿಡು ಬಿಡು ತಾಯಿ ಕೇಳ್ ಧಡಿಗ ಕರ್ಣಾದ್ಯರ । ಬಡೆವೆನು ನಿಮಿಷದಲಿ ॥ ಷಡುರಥರನು ತಲೆಗಡಿವೆ ನೋಡಾದರೆ । ಹುಡುಗನ ವಿಕ್ರಮವ ॥ ೧ ॥

ರಾಗ ಕಾಂಭೋಜ ಏಕತಾಳ

ನೀತಿಯಲ್ಲ ಪೋಪುದಿಂದು । ಕಂದ ಕಂದ । ಎನ್ನ । ಘಾತಿಸಿ ಪೋಗಯ್ಯ ರಣಕೆ । ಕಂದ ಕಂದ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಪಾರ್ಥಿವವಂಶದಿ ಜನಿಸಿದ ಮೇಲೆ ಸ । ಮರ್ಥನೆಂದೆನಿಸದಿರೆ ॥ ಪುತ್ರನೆನ್ನುತ ಮನೆಯೊಳಗಿರಲಿಳೆಯೊಳು । ಕೀರ್ತಿಗಳಹುದೆ ಪೇಳು ॥ ೧ ॥

ರಾಗ ಕಾಂಭೋಜ ಏಕತಾಳ

ಸರಸವಲ್ಲ ಸಮರವಿಂದು । ಕಂದ ಕಂದ । ಕಲಶ । ತರಳನ ಗೆಲಲಾಭವಗರಿದು । ಕಂದ ಕಂದ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಅಳುಕದೆ ಕೇಳ್ ಕೊಳುಗುಳದಲಿ ದ್ರೋಣನ । ಗ್ಗಳಿಕೆಯ ನಿಲಿಸುವೆನು ॥ ಅಳಿವುದುಳಿವುದು ಪುಣ್ಯವಶವದು ರಿಪುಬಲ । ಜಲಧಿಯ ಕಲಕುವೆನು ॥ ೧ ॥

ರಾಗ ಕಾಂಭೋಜ ಏಕತಾಳ

ಹಿರಿಯ ತಂದೆಯಂಜರ್ ಯಾಕೊ । ಕಂದ ಕಂದ । ಮುಂದೆ । ಬರುವ ಹಾನಿ ವೃದ್ಧಿಯೆಂತೊ । ಕಂದ ಕಂದ ॥ ೧ ॥

ಭಾಮಿನಿ

ಪೊಡವಿಪತಿ ಕೇಳಿಂತು ಕುವರನ । ನುಡಿದು ತಕ್ಕೈಸುತಲಿ ಶೋಕದ । ಕಡಲೊಳಾಳುತ್ತಿರ್ದಳಂದಿಲಿ ಹಲುಬುತಾ ಜನನಿ ॥ ತಡೆವರೇನಿಲಿ ತಾಯೆ ಈಪರಿ । ನುಡಿವರೇ ರಣವನ್ನು ಜಯಿಸೆಂ । ದೊಡನೆ ಕಳುಹಿದೆ ಮರುಗುವರೆ ನೀನೆಂದನಭಿಮನ್ಯು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಸುರಿವ ಕಂಬನಿಯನ್ನು ಸೆರಗಿಂ । ದೊರಸಿ ಜನನಿಯ ಪಾದರಜವನು । ಶಿರದೊಳಾಂತಾ ಪಾರ್ಥನಂದನ । ಪೊರಟನಾಗ ॥ ೧ ॥ ಭಾರಿ ಖತಿಗೊಂಡಾಕ್ಷಣವೆ ರಣ । ಧೀರ ಖಡ್ಗವ ಝುಳಪಿಸುತಲು । ವೈರಿ ನಡೆತರೆ ಕಂಡು ಸುಮನಸ । ವಾರ ಮರುಗೆ ॥ ೨ ॥ ಧರಣಿಪತಿ ನಿರ್ದಯನಲಾಯೆಳೆ । ಗರುವ ನೂಕುವರುಂಟೆ ವ್ಯಾಘ್ರನ । ಜರಿಗೆ ಧೊರೆತನ ಸುಡು ಸುಡೆಂದರು । ನೆರೆದ ಜನರು ॥ ೩ ॥ ಝುಳಪಿಸುವ ಗಂಡುಡುಗೆ ಝೋಂಪಿಸೆ । ಹೊಳೆವ ಹೊನ್ನ ಕಠಾರಿಯಾಯುಧ । ಗಳ ಸಮಗ್ರವನಾಂತು ನಗುವೊಗ । ಚೆಲುವ ಪೊರಟ ॥ ೪ ॥ ಅರಸನಂಘ್ರಿಗೆ ನಮಿಸಿ ನಕುಲಾ । ದ್ಯರಿಗೆ ವಂದಿಸಿ ಭೂಮಿ-ದಿವಿಜರ । ಹರಕೆಗೊಂಡೇರಿದನು ಮಣಿರಥ । ವಿರದೆ ಬಳಿಕ ॥ ೫ ॥ ಮೊಳಗಿದುವು ಬಲು ವಾದ್ಯ ನಾಲ್ದೆಸೆ । ಗಳನು ಕಂಪಿಸೆ ಛತ್ರ ಚಾಮರ । ಗಳು ವಿರಾಜಿಸಲಖಿಳಬಲ ಬೆಂ । ಬಳಿಯ ಬರಲು ॥ ೬ ॥

ಭಾಮಿನಿ

ಅರಸ ಕೇಳ್ಳೈ ಸೂರ್ಯರಥವೇ । ಧರಣಿಗಿಳಿವಂದದಲಿ ಪಟುಭಟ । ರರಸನಮಲ ವರೂಥ ಭರೆ ಕಂಡಾಗ ಕಾಂತೆಯರು ॥ ಕರಗುತಿರ್ದರು ಶಿವ ಶಿವಾ ಮೋ । ಹರದ ದುರ್ಗವನೆಂತು ಪೊಗುವನೊ । ತರಳತನವಲ್ಲೆಂದು ಕಂಬನಿದುಂಬುತುಸಿರಿದರು ॥ ೧ ॥

ರಾಗ ನೀಲಾಂಬರಿ ಏಕತಾಳ

ಆಡುವ ಬಾಲನಲ್ಲೆ । ಅಭಿಮನ್ಯುವಿನ । ನೋಡಿತ್ತ ಪೋಗುವನಲ್ಲೆ ॥ ರೂಢಿಪ ಚಕ್ರವ್ಯೂಹಕೆ । ಈ ಸಣ್ಣ ಮಗುವ । ದೂಡುವರಲ್ಲೆ ಯುದ್ಧಕೆ ॥ ॥ ೧ ॥ ಎಂತು ಕಾದುವನೊ ಈತ । ಷಡುರಥರೊಳು । ಕಂತುಸ್ವರೂಪ ಜಾತ ॥ ಪಂಥವ ಬಿಡಲೊಲ್ಲನು । ಹೇಗಾಗುವುದೊ । ಅಂತಕಾಂತಕ

ಬಲ್ಲನು ॥ ೨ ॥ ತಂದೆಯಿಲ್ಲದ ವೇಳ್ಯದಿ । ಈ ಸಣ್ಣ ಶಿಶುವ । ಮುಂದಕಟ್ಟುವರ್ ಭರದಿ ॥ ಮಂದಮತಿಯಾದಳೇನೆ । ಸೌಭದ್ರಾದೇವಿ । ಯಿಂದೆಂತು ಬಿಟ್ಟಳೊ ಜಾಣೆ ॥ ೩ ॥

ವಾರ್ಧಿಕ

ಮಕ್ಕಳಂ ಪಡೆದ ಗುಣಶೀಲೆಯರ್ ಬಾಲೆಯರ್ । ಕಕ್ಕುಲಿತೆಗೊಳುತ ಮಾತಾಡುತಂ ನೋಡುತಂ । ದುಃಖರಸಶರಧಿಯೊಳಗಾಳುತಂ ಏಳುತಂ ಬೆರಗಾಗಿ ಬೆಂಡಾದರು ॥ ಒಕ್ಕಣಿಸಲೇನಿತ್ತಲಭಿಮನ್ಯು ಧನುವನುಂ । ಘೆಕ್ಕನುರೆ ಝೇಂಕರಿಸೆ ನರಲೋಕ ಸುರಲೋಕ । ಜಕ್ಕುಳಿಸಲಾ ಧನುರ್ನಾದದಿಂ ಭೇದದಿಂ ರಿಪುದುರ್ಗ ತಲ್ಲಣಿಸಲು ॥ ೧ ॥ ತೊಲತೊಲಗು ರಿಪುಗಜ ಮೃಗೇಂದ್ರನೆಲೆ ಬರುತಲಿದೆ । ತೊಲತೊಲಗು ವೈರಿವಿಪಿನಕುಠಾರ ಬರುತಲಿದೆ । ತೊಲತೊಲಗು ಕುರುಕುಲೋರಗದುಷ್ಟಸಂತತಿಗೆ ಖಗರಾಜ ಬರುತಲಿದಕೊ ॥ ತೊಲತೊಲಗು ಶತ್ರುಮೇಘಸಮೀರ ಬರುತಲಿದೆ । ತೊಲತೊಲಗು ಪರಬಲಾಚಲವಜ್ರ ಬರುತಲಿದೆ । ತೊಲತೊಲಗು ಪಾಂಡವರ ಕುಲದೀಪ ಬರುತಿದೆಂದೊದರೆ ಕಹಳಾರವಗಳು ॥ ೨ ॥

ರಾಗ ಕೇದಾರಗೌಳ ಅಷ್ಟತಾಳ

ಎಂದು ಕಹಳೆಗಳ್ ಘೋರ್ಗುಡಿಸಲು ಪಾರ್ಥನ । ನಂದನನಾ ರಥವು ॥ ಮುಂದುವರಿದು ಬರೆ ಸಾರಥಿಯಭಿಮನ್ಯು । ಗೆಂದನೊಂದುತ್ತರವ ॥ ೧ ॥ ಕಟಕ ನೋಡಿದುವೆ ಬಾಲಕನೆ ಈ ಸಮರ ಧೂ । ರ್ಜಟಿಯಾತ್ಮಭವನಿಗಿಂದು ॥ ಘಟಿಸಲಸಾಧ್ಯ ನೀನಿದಕುಬ್ಬಿ ಬಹರೆ ಕೇಳ್ । ಭಟ ನಿನ್ನ ಮನವೇನಯ್ಯ ॥ ೨ ॥ ಕೊರಳಿನ ಬಲುಹ ನೋಡದೆ ತಾ ಮಹಾದ್ರಿಯ । ಹೊರಿಸಲಂಪೈಸುವರೆ ॥ ಗುರು ಕೃಪಾಶ್ವತ್ಥಾಮ ಕರ್ಣಾದಿ ಭಟರೆಲ್ಲ । ಸುರರನ್ನು ಲೆಕ್ಕಿಪರೆ ॥ ೩ ॥ ಆರರೆ ಮೆಚ್ಚಿದೆನು ನಿನ್ನಯ ಶೌರ್ಯಕೆಂದು ಕೈ । ಬೆರಳ ಮೂಗಿನೊಳಿಡುತ ॥ ಶಿರವ ತೂಗಲು ಕಂಡು ಸೂತನೊಳಿಂತೆಂದ । ನರನ ಕುವರ ನಗುತ ॥ ೪ ॥

ರಾಗ ಕಾಂಭೋಜ ಝುಂಪೆತಾಳ

ಮರುಳೆ ಸಾರಥಿ ಕೇಳು ನಮ್ಮ ನಾವೇ ಪೊಗಳಿ । ಮೆರೆಯಲಾಗದು ಸುಪ್ರಸಿದ್ಧ ॥ ಗುರು ಕೃಪಾಶ್ವತ್ಥಾಮ ಕರ್ಣ ಸೈಂಧವ ಶಕುನಿ । ನೊರಜು ಈ ನರರ ಪಾಡೇನು ॥ ೧ ॥ ಧುರದೊಳ್ ಕಪರ್ದಿಯಾನನದಿ ಶ್ರಮಜಲಬಿಂದು ।

ಸುರಿಸುವೆನು ರಣದಿ ಭಾರ್ಗವನ ॥ ಗರುವವನ್ನೀಗಿ ವೃತ್ರಾರಿಯನು ಬಡಿದು ಸಂ । ಚರಣೆ ನಿಲಿಸುವೆನು ಕೃತಾಂತಕನ ॥ ೨ ॥ ಅವರಿವರೊಳೇನು ಸಾರಥಿ ಕೇಳು ತನ್ನನು । ಧ್ವನಿಸಿದ ಪರಾಕ್ರಮಿಯು ಪಾರ್ಥ ॥ ಬವರದೊಳಗಿದಿರಾಗಿ ನಿಂದಡೊಮ್ಮೆಗೆ ಗೆಲುವೆ । ತವಕದಿಂ ರಥವ ಹರಿಸೆಂದ ॥ ೩ ॥

ರಾಗ ಭೈರವಿ ತ್ರಿವುಡೆತಾಳ

ಅರಸ ಕೇಳಾ ಚಾಪನಾದಕೆ । ತರಹರಿಸೆ ಕುರುಸೇನೆ ಗಜರಥ । ತುರಗಗಳ ಮುಂದಿರಿಸಿ ಬಾಗಿಲೊ । ಳುರವಣಿಸುತಲೆ ತಡೆದು ನಿಲ್ಲಲು । ಹರಿಯಳಿಯನದ ಬಲ್ಲನೇ ಹೊ । ಕ್ಕಿರಿದು ರಥವನು ನೂಕಿ ರಿಪುಗಳ । ಶಿರವ ಚೆಂಡಾಡಿದನು ಕೊಳವನು । ಕರಿಯು ಕದಡಿದ ತೆರದಿ ನಿಮಿಷದೊ ॥ ಳೇನನೆಂಬೆ । ಸಾಹಸ । ವೇನನೆಂಬೆ ॥ ೧ ॥ ಘುಡುಘುಡಿಸುತಲೆ ಕಲಿ ಜಯದ್ರಥ । ತಡೆದು ನಿಲ್ಲಲು ತವಕದಿಂದಲಿ । ಫಡ ಫಡಿದಿರಲಿ ತೊಲಗೆನುತ ಮು । ಕ್ಕಡಿಯ ಮಾಡಿದನವನ ರಥವನು । ಬಿಡದೆ ಸಾರಥಿಸಹಿತ ಚಾಪವ । ಕಡಿದು ಸೌಬಲ ಮುಖ್ಯರನು ಜವ । ಗೆಡಿಸಿದನು ಕಾಲಾಗ್ನಿರುದ್ರನ । ಕಡುಹಿದೆನಲಭಿಮನ್ಯು ಸಮರವ ॥ ನೇನನೆಂಬೆ । ಸಾಹಸ । ವೇನನೆಂಬೆ ॥ ೨ ॥ ರಥ ಮುರಿದು ಮನಗುಂದುತತಿ ಮಹ । ರಥರು ಹಿಮ್ಮೆಟ್ಟಿದರು ಕ್ಷಣದಲಿ । ವಿತರಣಾಗ್ರಣಿ ವೀರ ಪಾರ್ಥನ । ಸುತನು ರಿಪುಗಳ ಸದೆಬಡೆದು ಹೊ । ಕ್ಕತಿರಥರ ಬಾಣಾವಳಿಗಳನು । ಮಥಿಸಿದನು ಮುಂದೊತ್ತುತಿಹ ಗಜ । ರಥತುರಂಗಪದಾತಿಗಳನೊರೆ । ಸುತ ಭಯಂಕರದೋರಿ ನಡೆದನು ॥ ಏನನೆಂಬೆ । ಸಾಹಸ । ವೇನನೆಂಬೆ ॥ ೩ ॥

ವಾರ್ಧಿಕ

ಕರಿ ತುರಗ ಕೋಟ್ಯಾನುಕೋಟಿಗಳನೊರೆಸಿದಂ । ತರುಬುವತಿರಥ ಮಹಾರಥರ ಸಂಹರಿಸಿದಂ । ಬೆರಸಿ ಕಾಲಾಳ್ಗಳ ಕರುಳ್ಗಳಂ ಸುರಿಸಿದಂ ಕೂರ್ಗಣೆಯೊಳಗಣಿತದಲಿ ॥ ಅರಸ ಕೇಳ್ ಮಕ್ಕಳಾಟಿಕೆ ಮಾರಿಯಾಯ್ತೆಂದು । ಕುರುಬಲದಿ ಕಾದುವಧಟರ ಕಾಣೆನಾ ರಣದಿ । ಸುರಪತಿಯ ಮೊಮ್ಮನ ಪರಾಕ್ರಮಕೆ ಮನದಂದು ದಿವಿಜಸಂತತಿ ಪೊಗಳಲು ॥ ೨ ॥

ರಾಗ ಭೈರವಿ ಏಕತಾಳ

ಇನ್ನೇನೆಂಬೆನು ರಣದಲಿ । ಅಭಿಮನ್ಯುವಿನಸ್ತ್ರಂಗಳಲಿ ॥ ಚೂರ್ಣವಾದುದು ಗಜರಥವು । ಬಲು । ಜೀರ್ಣವಾದುದು ಕುರುಬಲವು ॥ ೧ ॥

ಪಥಗಾಣದೆ ಮುಂದೆ ಸಿಕ್ಕಿ । ಅತಿ । ರಥರಿಳೆಯೊಳು ಧುಮ್ಮಿಕ್ಕಿ ॥ ಅತಿ ಭಯದಲಿ ನಡುಗಿದರು । ಬಲು । ಸ್ತುತಿಸುತ ಪದಕೆರಗಿದರು ॥ ೨ ॥ ಕೊರಳನು ಕಾಯೆಂದೆನುತ । ತಮ್ಮ । ಬೆರಳನು ಬಾಯೊಳಗಿಡುತ ॥ ಶರಚಾಪವನಿಕ್ಕಿದರು । ನಿಜ । ಕರದಿ ತೃಣವ ಕಚ್ಚಿದರು ॥ ೩ ॥

ಭಾಮಿನಿ

ಅರಸ ಕೇಳಭಿಮನ್ಯುಝುಡಿತಕೆ । ಜರಿದುದಬುಜವ್ಯೂಹ ಕರಿಘಟೆ । ತುರಗ ಕಾಲಾಳುಗಳು ನುಗ್ಗಾಯ್ತು ಪರಿಮಿತವಾಗಿ ॥ ಶರಣೆಸುತ ದ್ರೋಣಾದಿಗಳು ವ್ಯೆ । ಮರಿದರರ್ಜುನನಣುಗನುಗ್ರಕೆ । ಕುರುಕುಲಾಗ್ರಣಿ ಕಂಡು ಬೆರಗಾಗುತ್ತಲಿಂತೆಂದ ॥ ೧ ॥

ರಾಗ ಪಂಚಾಗತಿ ಮಟ್ಟೆತಾಳ

ಭಳಿರೆ ಪಾರ್ಥನಣುಗ ನಿನ್ನ । ಬಲುಹಿಗಿನ್ನು ಸರಿಯದಾರು । ಹಲವರೀತಕೊಬ್ಬ ಸಾಕು ಕುಲಕೆ ರತುನನು ॥ ಫಲುಗುಣನು ಕೃತಾರ್ಥನಾದ । ನೊಲಿದು ನಿನ್ನ ಪಡೆದ ಬಗೆಯೊ । ಛಲಸದೆಂದ ಕೌರವೇಂದ್ರ । ತಲೆಯ ತೂಗುತ ॥ ೧ ॥ ಎನುತ ಭಾರಿ ಧನುವ ಕೊಂಡು । ಕನಲಿ ಮನ್ನೆಯರನು ಜರಿದು । ತನಯನೊಡನೆ ತರುಬಿ ನಿಂದ । ರಣಸಮರ್ಥನು ॥ ಅಣುಗ ನೀನು ಕೆಡಲುಬೇಡ । ಗುಣದಿ ಪೋಗು ಪೋಗೆನುತ್ತ । ಕಣೆಯ ಮಳೆಯ ಕರೆದನಾಗ । ಲೆಣಿಕೆಯುಲ್ಲದೆ ॥ ೨ ॥ ನಾನು ಅಣುಗನಾದಡೆನ್ನ । ಬಾಣಗಳಿಗೆ ಬಾಲತನವೆ । ಹೂಣಿ ನೋಡಿರೆನುತಲೆಚ್ಚ । ಸಾಣೆಶರಗಳ ॥ ಕ್ಷೋಣಿಪತಿಗೆ ಗಾಯವಾಗೆ । ಕ್ಷೀಣವಾಯ್ತು ರಥವು ರಣದಿ । ತ್ರಾಣಗುಂದಲಾಗ ತಿಳಿದ । ನಾ ನರಾತ್ಮಜ ॥ ೩ ॥ ಒದಗಿನಿಂದಲಾಗ ಕಪಟ । ಹೃದಯನನ್ನು ಹಿಡಿವುತವನ । ಸದೆಯುತಾಗ ಮೂದಲಿಸಿದ । ವಿಧವಿಧಂಗಳೊಳ್ ॥ ೪ ॥

ರಾಗ ತೋಡಿ ಅಷ್ಟತಾಳ

ಸಿಕ್ಕಿದೆಯ ಕುರುರಾಯ । ನಿನ್ನ । ಠಕ್ಕುತಾಳಿಗಳ ತೋರು ತೋರಯ್ಯ ॥ ರಕ್ಕಸಾರಿಯ ದ್ರೋಹಿ । ಸೊಕ್ಕಿಲಿ ನೀನು ರ । ಣಕ್ಕೆ ಬಂದೆನ್ನೊಳು । ಕಕ್ಕುಲತೆಯೊಳೀಗ ॥ ಸಿಕ್ಕಿದೆಯ ॥ ೧ ॥ ಮುನ್ನ ಜೂಜಿನ ಸಭೆಯೊಳಗೆ । ನಮ್ಮ । ಬನ್ನಬಡಿಸುತದರೊಳಗೆ ॥ ಎನ್ನ ಮಾತೆಯ ಶಾಲೆ । ಯನ್ನು ಸೆಳೆದು ಮಾನ । ಹೊನ್ನು ಕಳೆದ ದ್ರೋಹಿ । ಎನ್ನ ಕೈಯೊಳೀಗ ॥ ಸಿಕ್ಕಿದೆಯ ॥ ೨ ॥ ಸತ್ಯವಂತನು ಧರ್ಮಸೂನು । ಅವನೊಳ್ । ಮಿಥ್ಯವ

ನಡೆಸಿದೆ ನೀನು ॥ ರಕ್ತಮದದಿ ಬಲು ಧೂರ್ತಜನವ ಗೆಯ್ದು । ವ್ಯರ್ಥವ್ರ ರೊಳಗೆ ನಿ । ರರ್ಥಕವಾಗಿಯೆ ॥ ಸಿಕ್ಕಿದೆಯು ॥ ೩ ॥ ವನಕೆ ನಮ್ಮನು ಅಟ್ಟಿ ಸುಖದಿ । ಬಲು । ಧನಮದದಿಂದ ಸಂತಸದಿ ॥ ಮನಕೆ ಬೇಕಾದ ಭೋ । ಜನಗೆಯ್ದು ಮದವೇರಿ । ಸೆಣಸಾಟವನು ಗೆಯ್ಯ । ಲೆನಗಿದಿರಾಗುತ್ತ ॥ ಸಿಕ್ಕಿದೆಯು ॥ ೪ ॥ ಇನತನುಜನ ಸೂನು ತಾನು । ಬೇಗ । ಅನಿಲಜ ನರ ಮಾದ್ರೇಯರನು ॥ ಅನಲಜೆಯನು ಕೂಡಿ । ವನಪ್ರದೇಶದೊಳಿರೆ । ಘನ ಘೋಷಯಾತ್ರೆಯ । ನೆವದಿ ಪೋದವನೀಗ ॥ ಸಿಕ್ಕಿದೆಯು ॥ ೫ ॥ ವನದಲ್ಲಿ ಜಲಕ್ರೀಡೆಯಾಡಿ । ಬಲು । ಮುನಿಗಳ ನಿರ್ಬಂಧ ಮಾಡಿ ॥ ಇನಸುತ ಸೌಬಲ । ನಿನ್ನನುಜರು ಕಾದಿ । ಘನ ಧೀರ ಚಿತ್ರಸೇ । ನನಲಿ ಸಿಕ್ಕಿದ ವೀರ ॥ ಸಿಕ್ಕಿದೆಯು ॥ ೬ ॥ ಒಂದು ಹನ್ನೊಂದು ವತ್ಸರದಿ । ಮುದ । ದಿಂದ ಚರಿಸಿ ವನಾಂತರದಿ ॥ ಒಂದು ವರುಷವಾಜ್ಞಾತ । ದಿಂದ ರಕ್ಷಿಸಿದಂಥ । ಇಂದಿರೆಯರಸನ । ಬಂಧಿಸಿದವನೀಗ ॥ ಸಿಕ್ಕಿದೆಯು ॥ ೭ ॥ ದ್ರೋಣ ಕರ್ಣಾದಿ ಸುಭಟರು । ಅತಿ । ಹೀನಬಲರು ಅಲ್ಪಬಲರು ॥ ಕ್ಷೋಣೀಶ ನಿನ್ನನು । ಕಾಣದೆ ಇರ್ಪರು । ಮಾನವಾಧಿಪ ಧರ್ಮ । ನಾಣೆ ನಿಶ್ಚಯವೀಗ ॥ ಸಿಕ್ಕಿದೆಯು ॥ ೮ ॥ ಕುಟಿಲತನದಿ ಗೆಲುವುದಕೆ । ಬಲು । ಭಟನೆನ್ನ ಯುದ್ಧ ಸಮ್ಮುಖಕೆ ॥ ಘಟಿಪುದೆ ನಿನ್ನ ಡು । ರ್ಘಟ ಯುಕ್ತಿ ನಡೆವುದೆ । ಸಟೆ ಯುಕ್ತಿಗಾರನೆ । ದಿಟ ಪರಾಕ್ರಮಿಯಲ್ಲಿ ॥ ಸಿಕ್ಕಿದೆಯು ॥ ೯ ॥ ಕಲಿಗಳ ನುಳಿದು ನೀ ಧುರದಿ । ಪ್ರಾಣ । ತೊಲಗುವುದಾಯ್ತೆನುವರದಿ ॥ ಕೊಲುವೆನೆಂದರೆ ಭೀಮ । ಗಳುಕಿ ಬಿಟ್ಟಿಹೆ ನಮ್ಮ । ಇಳೆಯಧಿಪತಿ ಧರ್ಮ । ನೊಳಗೆ ಜೀವಿಸು ನೀನು ॥ ಸಿಕ್ಕಿದೆಯು ॥ ೧೦ ॥

ಭಾಮಿನಿ

ಬಿಡಿಸುವವರಾರಿನ್ನು ದ್ರೋಣನೊ । ಕಡೆಯೊಳಾ ಕೃಪ ಶಲ್ಯ ಶಕುನಿಯೊ । ಜಡಜಸಖಸುತ ಕರ್ಣ ಸೈಂಧವನೆಮನೊ ಧೂರ್ಜಟಿಯೊ ॥ ನುಡಿಯೊ ಮೂಢನೆ ನಿನ್ನ ಮೊದಲಲಿ । ಪಡೆದ ಜನನಿಯು ಒಡಲ ಹೊಗುವೆಯೊ । ಪಿಡಿಯೆನುತ ಮೂದಲಿಸಿ ನುಡಿಯಲು ಕಂಡನಾ ದ್ರೋಣ ॥ ೧ ॥ ಅರಸ ಸಿಕ್ಕಿದನಕಟ ಬಾ ಬಾ । ತರಣಿಸುತ ಸೌಬಲ ಕೃಪಾದ್ಯರು । ಧರಿಸಿ ಶಸ್ತ್ರಾಸ್ತ್ರಗಳನೆನುತೊದರಿದನು ಕಲಿ ದ್ರೋಣ ॥ ಹರಿವುತತಿರಥರಾ ಕ್ಷಣವೆ ಕಂರು । ವರನ ತೊಲಗಿಸಿದರು ಕಿರೀಟಿಯು । ತರಳನನು ಮುಸುಕುತ್ತ ಮತ್ತಾ ದ್ರೋಣನಿಂತೆಂದ ॥ ೨ ॥

ರಾಗ ಮಾರವಿ ಏಕತಾಳ

ನೋಡೆವು ನೀ ಗೆದ್ದವ ಶಿಶುಹತ್ಯದ । ಪಾತಕಕಂಜುವೆವು ॥ ಆತುಕೊಳೆಂದಾ ದ್ರೋಣ ಮಹಾಶರ । ವ್ರಾತವ ಮುಸುಕಿದನು ॥ ೧ ॥ ಶಿಶುತನದಲಿ ಶಂಬರನೆಂಬಸುರನ । ಅಸುಗೊಳ್ಳನೆ ಸ್ಮರನು ॥ ಶಶಿಧರಸುತ ಗುಹ ತಾರಕದೈತ್ಯನ । ಉಸಿರನು ತೊಲಗಿಸನೆ ॥ ೨ ॥ ಶಿಶುವೇ ಪಾರ್ಥಕುಮಾರಕ ರಿಪುಭಟ । ರೆಸೆದಸ್ತ್ರಾವಳಿಯು ॥ ಕುಶಲದಿ ತರಿವುತ ಷಡುರಥರನು ಮಿಗೆ । ದೆಸೆಗೆಡಿಸಿದನಂದು ॥ ೩ ॥

ವಾರ್ಧಿಕ

ಗುರುಸುತನ ನೋಯಿಸಿ ರಣಾಗ್ರದೊಳ್ ಶಲ್ಯನಂ । ಮುರಿದೆಚ್ಚು ಕೃಪನುಗ್ರಮಂ ನಿಲಿಸಿ ಕೃತವರ್ಮ । ನುರವಣೆಯೊಳೆಸೆದು ದುಶ್ಶಾಸನನ ಗರ್ವಮಂ ಮುರಿದನೊಂದೇ ಕ್ಷಣದೊಳು ॥ ದುರುಳ ಬಾಹ್ಲಿಕ ಸೋಮ ದತ್ತರಂ ಸದೆಬಡೆದು । ಧುರದೊಳ್ ಮಹಾರಥರನೊಬ್ಬನೇ ಶಿಶು ಗೆಲಿದ । ನರರಿ ಕೌತುಕವೆಂದು ಕಂಡು ಕರ್ಣಂ ಬಂದು ತಡೆದನಾ ಬಾಲಕನನು ॥ ೧ ॥

ರಾಗ ಭೈರವಿ ಅಷ್ಟತಾಳ

ಎಲವೊ ಬಾಲಕನೆ ಕೇಳು । ನಮ್ಮಯ ಕುಲ । ಬಲವ ನೀ ಸಮರದೊಳು ॥ ಗೆಲಿದೆನೆನುತ ಹಿಗ್ಗಬೇಡವೆಂದೆಚ್ಚನು । ಬಲುತರ ಶರಗಳನು ॥ ೧ ॥ ನಾವು ಬಾಲಕರಹುದು । ನಮ್ಮಸ್ತ್ರದಿ । ನೀವು ಜೀವಿಸಿಕೊಂಬುದು ॥ ಠೀವಿಯ ನಾ ನೋಳ್ಪೆನೆಂದೆಚ್ಚನಭಿಮನ್ಯು । ಹಾವಳಿಯೇನೆಂಬೆನು ॥ ೨ ॥ ಮೂರಾರು ಮಾರ್ಗಣದಿ । ಕರ್ಣನ ಎದೆ । ಡೋರುಗಳೆದನುಗ್ರದಿ ॥ ಗಾರುಗೊಂಡೆದೆಯಾರಿ ಸೊರಗಿದ ರಣದಲಿ । ಪೂರಾಯ ಗಾಯದಲಿ ॥ ೩ ॥ ರವಿಜ ಮೈಮರೆಯುಲಾಗ । ಕಾಣುತ ಶಲ್ಯ । ನವಘಡಿಸುತಲಿ ಬೇಗ ॥ ಕುವರ ನೀ ಘಡ ಹೋಗೆಂದೆಚ್ಚನು ಶರಗಳು । ಕವಿದುದು ಸಮರದೊಳು ॥ ೪ ॥ ಬಾಲನೆಂದುಸಿರಬೇಡ । ಎನ್ನಸ್ತ್ರಕೆ । ಬಾಲತ್ವವುಂಟೆ ನೋಡ ॥ ಆಳಿನಂಗವನೇನ ಬಲ್ಲೆಯೆಂದಭಿಮನ್ಯು । ಕೀಲಿಸಿದಸ್ತ್ರವನು ॥ ೫ ॥ ನರಜನ ಬಾಣಗಳ । ಖಂಡಿಸಿ ಶಲ್ಯ । ನುರುತರದಂಬುಗಳ ॥ ಸುರಿಯಲು ತರಿವುತ ಪದಿನೈದು ಬಾಣದೊ । ಳೊರಗಿಸಿದನು ಧುರದಿ ॥ ೬ ॥

ವಾರ್ಧಿಕ

ಅರಸ ಕೇಳ್ ಶಲ್ಯ ಮೈಮರೆಯಲವನನುಜ ಹುಂ । ಕರಿಸುತಭಿಮನ್ಯುವಂ ಧುರದೊಳಡಹಾಯ್ವುತಿರ । ಲೆರಡು ಶರದಿಂದವನ ಶಿರವ

ನಿಳುಹಲು ಬಳಿಕ ಕಾದುವಧಟರ ಕಾಣೆನು ॥ ಮುರಿದು ಮಾದ್ರೇಶವೋಹ ರವು ಹಿಮ್ಮೆಟ್ಟುತಿರ । ಲರಿಭಯಂಕರ ದ್ರೋಣನರಿತು ಕೃಪನಿಂಗೆ ವಿ । ಸ್ತರಿಸಿದಂ ಫಣೆಗಣ್ಣ ಹರನೀತ ಶಿಶುವೆ ಸಂಗರದೊಳಸದಳವೆಂದನು ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಗರುಡಿಯಾಚಾರ್ಯನ ನುಡಿ ಕೇಳಿ ಕೌರವ । ರರಸನು ಕಿಡಿಯಿಡುತ ॥ ಕರೆದು ಕರ್ಣನಿಗೆ ಮೆಚ್ಚಿಸುತಿರ್ದನಿವರು ಬಾ । ಹಿರರೆಂದು ಬಯ್ಯುತಲೆ ॥ ॥ ೧ ॥ ಬಿಡದರಿಭಟನ ಪೊಗಳುವರು ನೋಡೆಮ್ಮ । ಕಡೆಯುವರಂಜುವಂತೆ ॥ ಕಡು ಖೂಳರೆಂಬೆನೆ ಗುರುಗಳು ನಾವಿಂತು । ಪಡೆದ ಸುಕೃತವೆಂದನು ॥ ೨ ॥ ನುಡಿಯ ಕೇಳ್ದನುಜ ದುಶ್ಶಾಸನನುಗ್ರದಿ । ಘುಡುಘುಡಿಸುತಲೆಂದನು ॥ ಬಿಡು ಚಿಂತೆ ವಿಪ್ರರ ನಡತೆಗಳ್ಯೆಸೆನ್ನ । ಬಿಡು ಸಂಗರಕೆ ಬೇಗದಿ ॥ ೩ ॥ ದೇವ ದಾನವರ ಸಮಾನವೆ ನೋಡೆನ್ನ । ಠೀವಿಯ ಸಂಗರದಿ ॥ ತೀವಿದ ರಿಪುಭಟ ನನು ತಲೆಗಡಿವೆನೆಂ । ದಾ ವೀರ ಪೊರವಂಟನು ॥ ೪ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಭೇರಿ ಶಂಖ ನಗಾರಿಗಳು ಮಿಗೆ । ಭೋರಿಡುತ ನಾಲ್ದೆಸೆಯು ಕಂಪಿಸೆ । ಭೂರಿ ಬಿರುದುಗಳಿಂದ ಪೊರಟನು । ದಾರ ಭಟನು ॥ ೧ ॥ ಭಾರಿ ಬಲಸಹ ಬರಲಿಕಿತ್ತಲು । ಸಾರಥಿಗೆ ಸೂಚಿಸಿದನಾ ರಣ । ಧೀರ ಪಾರ್ಥಜ ಭುಜವ ನೊದರಿಸು । ತಾರುಭಟಿಸಿ ॥ ೨ ॥ ಕೇಳು ಸಾರಥಿಯೆರಡು ಶರದಲಿ । ಸೀಳಿ ಬೆನ್ನಲಿ ಕರುಳ ತೆಗೆವೆನು । ಖೂಳನನು ನೀ ನೋಡು ಮಮ ಕ । ಟ್ಟಾಳುತನವ ॥ ೩ ॥ ಎನುತ ಕೊನೆಮಿಸೆಗ[illegible] ತಿರುಹುತ । ಧನುವ ಝೇಂಕರಿಸಲು ಜಗತ್ರಯ । ಘನ ಪರಾಕ್ರಮಕದುರೆ ಕೌರವ । ನನುಜಗೆಂದ ॥ ೪ ॥ ಭೀಷಣನು ನೀನಹುದೆಲವೊ ದು । ಶ್ಶಾಸನನೆ ಕೇಳ್ ನಿನ್ನ ಭಂಗಿಸ । ದೀಸ ಕಂಜಿದರೆನಗೆ ಶರಸ । ನ್ನ್ಯಾಸವಿನ್ನು ॥ ೫ ॥

ರಾಗ ಮಾರವಿ ಮಟ್ಟೆತಾಳ

ಎಂದ ಮಾತಿಗೆ । ಕೌರವಾನುಜ । ನಿಂದು ನೂರು ಶರವನೆಚ್ಚ । ನಂದು ನರಜಗೆ ॥ ೧ ॥ ಭೀಮ ಫಲುಗುಣ । ರೆಂಬವರೊಳು ಸಂ । ಗ್ರಾಮ ಗೊಡವುದುಚಿತ ನೀನು । ಹುಡುಗನಾದೆಲ ॥ ೨ ॥ ಕೊಳಚೆ ನೀರನು । ದಾಟಲರಿಯದೆ । ಜಲಧಿ ಕಾಲ ಹೊಳೆಯಿದೆಂಬ । ಶೌರ್ಯವೇತಕೆ ॥ ೩ ॥ ಭೀಮ ಪಾರ್ಥರ । ಗೊಡವೆಯೇತಕೊ । ನೀನು ಮೊದಲು ಸೆಣಸಿ ಜೀವಿ ।

ಸೆನ್ನ ಕೈಯಲಿ ॥ ಎನುತನೇಕ ಮಾ । ರ್ಗಣಗಳಿಂದಲಿ । ಕನಲಿ ಕವಿಯಲೆಂಟು ದೆಸೆಯಂ । ಕಾಣದಿದ್ದುವು ॥ ೫ ॥

ವಾರ್ಧಿಕ

ಅಭಿಮನ್ಯು ಬಿಟ್ಟ ಪ್ರತಿಕೂಲ ಶರಜಾಲ ರಿಪು । ಸುಭಟನ ಶತಾಸ್ತ್ರಮಂ ಕಡೆಗಡಿದು ಸದೆಬಡೆದು । ಇಭ ಘಟೆ ತುರಂಗ ಕಾಲಾಳ್ಗಳಂ ಸಾಲ್ಗಳಂ ಸವರಿ ಬಲು ಸೈನಿಕವನು ॥ ರಭಸದಿಂದೆದ್ದಾಗ ಕೊಚ್ಚಿದವು ಮುಚ್ಚಿದವು । ಅಭಿಷವೋದ್ಭಾಸದಿಂ ಬೀರಿದವು ತೂರಿದವು । ನಭಕಡರುವಂದದಿ ನರೂಥಗಳ ಯೂಥಗಳನೇನೆಂಬೆನಚ್ಚರಿಯನು ॥ ೧ ॥

ಭಾಮಿನಿ

ರಾಯ ಕೇಳಭಿಮನ್ಯುಬಾಣನಿ । ಕಾಯವನು ಸದೆಬಡಿದು ಬಹುಶರ । ಸಾಯಕವ ಬಿಡಲದನು ಖಂಡಿಸಿ ಪಾರ್ಥಸುತನೆಂದ ॥ ತಾಯಿಗಪಮಾನವನು ಮಾಡಿದ । ನಾಯಿ ನಿನ್ನನು ಕೊಲುವೆನೆಂದರೆ । ವಾಯುಪುತ್ರನ ಭಾಷೆಗಂಜುವೆನೆಂದು ತೆಗೆದೆಚ್ಚ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ರಾಯ ಜನಮೇಜಯ ಕೇಳಿತ್ತಲಭಿಮನ್ಯು । ಸಾಯಕದಲಿ ದುಶ್ಶಾಸನನು ॥ ಗಾಯವಡೆದು ಗರ್ವಗುಂದಿ ಮೂರ್ಛಿತನಾಗ । ಲಾಯೆಡೆಯಲಿ ಕರ್ಣ ತಡೆದ ॥ ೧ ॥ ಮಗುವೆನುತೊಮ್ಮೆ ನಾ ಬಿಟ್ಟರೆ ಗರ್ವದಿ । ಮಿಗುವರಿದೆಮ್ಮಯ ಬಲವ ॥ ಹಗರಣಗೊಳಿಸಿದೆ ಫಡ ಫಡೆಂದಡಹಾಯ್ದು । ತೆಗೆದೆಚ್ಚನಸ್ತ್ರಸಂಕುಲವ ॥ ೨ ॥ ಬಲ್ಲೆ ನೀ ಬಾಯಬಡಕನೆಂದು ನಿನ್ನನು । ಕೊಲ್ಲಲು ಪಿತನು ಕೋಪಿಸುವ ॥ ನಿಲ್ಲು ನಿಲ್ಲಾದರೆಂದೆನುತೆಂಟು ಶರದಿಂದ । ಬಿಲ್ಲ ಖಂಡಿಸಿ ಭೀಕರಿಸಿದ ॥ ೩ ॥ ಶರಹತಿಯಲಿ ನಿರಾಯುಧನಾಗಿ ಭಯಗೊಂಡು । ತರಹರಿಸಿದ ಕರ್ಣನಂದು ॥ ಸುರಿವ ರಕ್ತದಿ ತೇರು ತೋಯ್ದುದು ಸಾರಥಿ । ತಿರುಗಿಸಿದನು ಬೇಗ ರಥವ ॥ ೪ ॥ ಪಿತನಿಂತು ಗಾಯವಡೆದನೆಂಬುದರಿತಾಗ । ಸುತ ವೃಷಧ್ವಜ ಬಂದು ತಡೆದ ॥ ಅತಿರಥನೊಡನಾತ ಕಾದಲೈದಂಬಿಲಿ । ಮಥಿಸಿದ ಕರ್ಣನಂದನನ ॥ ೫ ॥

ಭಾಮಿನಿ

ಕೆಲಬರೀಪರಿಯಿಂದ ಮಡಿದರು । ಕೆಲಬರತಿ ಗಾಯದಲಿ ನೊಂದರು । ಕೆಲಬರಾಯುಧಗಳನು ಬಿಟ್ಟೋಡಿದರು ಸಂಗರದಿ ॥ ನಿಲದೆ ಕುರುಸೇನಾ-

ಸಮುದ್ರವು ಕಲಕಿತಭಿಮನ್ಯುವಿನ ಝಡಿತಕೆ । ವಿಲಯಭೈರವನೆನಿಸಿ ತೋರಿದನಾ ಮಹಾರಣದಿ ॥ ೧ ॥

ರಾಗ ಮಾರವಿ ಝಂಪೆತಾಳ

ಇತ್ತಲಭಿಮನ್ಯು ಷಡುರಥರೊಡನೆ ಕಾದುತಿರ । ಲತ್ತ ಧರ್ಮಜ ಮನದಿ ಚಿಂತಿಸುತಲೆಂದ ॥ ಪುತ್ರನೊಬ್ಬನೆ ಪೋದನೇನಾದನೋ ಕಾಣೆ । ಸತ್ತ್ವಾತಿಶಯ ಭೀಮ ಪೋಗಯ್ಯ ರಣಕೆ ॥ ೧ ॥ ನಕುಲ ಧೃಷ್ಟದ್ಯುಮ್ನ ದ್ರುಪದಾ ವಿರಾಟ ಸಾ । ತ್ಯಕಿ ಸಹಿತ ಪೋಗಿಸ್ಯೆ ತಡಮಾಡದೀಗ ॥ ಸಕಲ ಸೈನಿಕಸಹಿತ ತೆರಳಿ ಬೆಂಬಲವಾಗಿ । ಸುಕುಮಾರಕನ ಬಿಡಿಸಿಕೊಂಡು ಬಾರಯ್ಯ ॥ ೨ ॥ ಕರಿ ತುರಗ ರಥ ಸಹಿತ ಸೈನಿಕರನೊಡಗೊಂಡು । ಪೊರಟ ರರಸಗೆ ನಮಿಸಿ ಪರುಠವಣೆಯಿಂದ ॥ ಮೊರೆದುವಗಣಿತ ವಾದ್ಯ ಭೇರಿ ತಂಬಟೆ ಕಹಳೆ । ತರತರದಿ ನೆಲನದುರುವಂತೆ ಘೋಷದಲಿ ॥ ೩ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಗದೆಯ ತಿರುಹುತ ಸಿಂಹನಾದದೊ । ಳೊದರಿ ಮಗನಾವೆಡೆಯೆನುತ ಬಲು । ಕದನಕಲಿಗಳ ದೇವ ಭೀಮನು । ಮೊದಲು ನಡೆದ ॥ ೧ ॥ ಪೃಥಿವಿ ಕಂಪಿಸೆ ಭೀಮಸೇನನ । ರಥದ ವಹಿಲಕೆ ಬರಲು ಬಾಗಿಲೊ । ಳತಿರಥರ ತಡೆದನು ಜಯದ್ರಥ । ಖತಿಯೊಳಿರದೆ ॥ ೨ ॥ ತೆರಹುಗೊಡು ಫಡ ಫಡ ಜಯುದ್ರಥ । ಹೊರತೆಗೆದು ನಿಲ್ಲೆಂದು ಹೂಣಿಗ । ರುರುಬಿದಡೆ ಮಾರಾಂತು ನಿಂದನು । ಹರನ ವರದಿ ॥ ೩ ॥ ತೆರಹುಗೊಡೆನಿಂದಿನಲಿ ನಡೆ ನಡೆ । ಮರೆದು ಕಳೆಯಭಿಮನ್ಯುವನು ಶಶಿ । ಧರನ ಕಾರುಣ್ಯಾವಲೋಕನ । ವಿರುವುದೆನಗೆ ॥ ॥ ೪ ॥ ಖೂಳ ನಿನಗೀ ಗರ್ವವೇಕೆಲೊ । ಬೋಳುಗೆಯ್ದುಡನರಿಯೆ ತೊಲ ಗೆಂ । ದಾಳು ಬಿಂಕದಿ ಕೊಟ್ಟ ಬಲುತರ । ಕಾಳಗವನು ॥ ೫ ॥ ನರ ಹೊರತು ನಿಮ್ಮಾಗ ನಾಲ್ವರ । ಸರಕುಮಾಡುವನಲ್ಲ ಹೋಗೆಂ । ದುರುತರಾ ಸ್ತ್ರವ ಕವಿಯಲನಿಲಜ । ನರಿತು ನುಡಿದ ॥ ೬ ॥

ಭಾಮಿನಿ

ಎಲೆ ಜಯುದ್ರಥ ಕೇಳು ನಿನ್ನಯ । ತಲೆಯ ಕೊಂಬನು ನಾಳೆ ಫಲು ಗುಣ । ತಿಳಿದುಕೋ ಎಂದಬ್ಬರಿಸುತಲ್ಲಿಂದ ಮರಳಿದನು ॥ ಉಳಿದ ಸುಭ ಟರು ಕಾದಲಾರದೆ । ಕಳವಳಿಸಿ ತಿರುಗಿದರು ದುರ್ಗದೊ । ಳಳವಿಗೊಡು ತಭಿಮನ್ಯು ಮೆರೆದನು ನರನ ಪ್ರತಿಯಾಗಿ ॥ ೧ ॥

ವಾರ್ಧಕ

ಅವನಿಪತಿ ಕೇಳಿತ್ತಲಭಿಮನ್ಯು ಸಮರದೊಳ್ । ಸವರಿದಂ ಪದಿನೆಂಟು ಸಾವಿರ ಗಜಂಗಳಂ । ವಿವರಿಸಲ್ಕಯ್ವತ್ತು ಸಾವಿರ ತುರಂಗ ಮೂವತ್ತು ಸಾವಿರ ರಥಿಕರ ॥ ಬವರದೊಳ್ ಗೆಲಿದು ಲಕ್ಷಪದಾತಿಗಳನೊರೆಸಿ । ತವಕದಿಂ ವೀರ ಶಲ್ಯಕುಮಾರನಂ ಮುರಿದು । ಲವಗಡಿಸುತಾಕ್ಷಣದಿ ದುರ್ಯೋಧನಾತ್ಮಜರ್ ಪಾರ್ಥಿಯಂ ತಡೆದರು ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ಸುರಪಸುತಕುಮಾರ ಕೇಳು ಶಲ್ಯಸುತನನು । ಮುರಿದೆನೆಂಬ ಗರ್ವ ಬೇಡ ನಿನ್ನವೊಡಲನು ॥ ಭರದಿ ಸೀಳಿ ತೆಗೆವೆವೀಗ ನಮ್ಮ ಸಖನನು । ಪರಿಕಿಸೆನುತ ಕರೆದರಾಗ ಸರಳ ಮಳೆಯನು ॥ ೧ ॥ ಇಹುದು ನಿಮಗೆ ಮಿತ್ರನಾದ ದಾತನೊಗ್ಗಿಲಿ । ವಿಹಿತದಿಂದ ಪವಡಿಸುವ ನೆಂದೆನುತ್ತ ಭರದಲಿ ॥ ಗಹಗಹಿಸುತಲೆರಡು ಶರದಿ ಲಕ್ಷಣಾದ್ಯರ । ಸಹಿತ ಕಡಿದನು ತ್ರಿಪಂಚಶರದೊಳೆಲ್ಲರ ॥ ॥ ೨ ॥ ಇಂತು ಕುವರಸಂತತಿಯನು ಸಂಹರಿಸಿದನು । ಚಿಂತಿಸುತಲೆ ಕೌರವೇಂದ್ರ ಕಾಣುತೆಂದನು ॥ ಪಂಥ ಸುಡು ಸುಡಿವರು ಬಂದು ಪೊಕ್ಕ ಮನೆಗಳು । ಎಂತು ಹಾಳುಬೀಳದಿಹುದೆ ದ್ರೋಣಕಲಿಗಳು ॥ ೩ ॥

ರಾಗ ನೀಲಾಂಬರಿ ಆದಿತಾಳ

ಇಕ್ಷುಚಾಪನಂತೆ ತೋರ್ಪ । ಲಕ್ಷಣ ಹಾ ಮಗನೆ ॥ ಅಕ್ಷಿಗಳ ತೆರೆದೀಗೆನ್ನ । ನೀಕ್ಷಿಸಿ ಮಾತಾಡು ॥ ೧ ॥ ಪಕ್ಷರಥರಿದ್ದೆನ್ನ ಸುತರ । ಬಿಡದೆ ವೈರಿಭಟನ ॥ ಜಡಿವಾಯುಧಕಾಹುತಿಯ ಕೊಟ್ಟೆ । ಮಿಡುಕಾಡುವರಲ್ಲ ॥ ॥ ೨ ॥ ಸಾಲದೆ ಪಾಂಡವರ ಕುಲಕೆ । ಬಾಲನೀತನೊಬ್ಬ ॥ ಖೂಳರಿವರ ಮಾತ ಕೇಳಿ । ಮೂಲವಳಿದುದಕಟ ॥ ೩ ॥

ರಾಗ ಕಾಂಭೋಜ ಝಂಪೆತಾಳ

ಅಳಿದನ ಮೊದಲೆಯು ಗಾಳಿ ಬರೆ ಖತಿಕಿಡಿ ಚ । ಡಾಳಿಸಿತು ಸುಭಟರೆಲ್ಲರಿಗೆ ॥ ಡಾಳಿಸುವ ಶಸ್ತ್ರಾಸ್ತ್ರಗಳ ಧರಿಸಿ ಮುತ್ತಿದರು । ಬಾಲಕನ ಮೇಲೆ ಮೇಲ್ವಾಯ್ದು ॥ ೧ ॥ ರವಿತನಯ ಶಲ್ಯ ಗೌತಮಿ ಕೌರವನ ತಮ್ಮ । ತವಕಿಸುತ ದ್ರೋಣಸುತ ಸಹಿತ ॥ ಇವರು ಷಡುರಥರೊಂದುಗೂಡಿ ಮುತ್ತಿದರುವಾ । ಸವನ ವೊಮ್ಮನ ರಣಾಂಗಣದಿ ॥ ೨ ॥ ಎಲವೊ ಮಗುವೆಂದು

ಬಿಟ್ಟಿವು ಎರಡು ಬಾರಿ ಕೇಳ್ । ಕಿಳಿಯದುವ್ಯೂಹದಿಂದ ಕುಣಿವೆ ॥ ಫಲು ಗುಣನ ಕರೆಸಿಕೋ ಬೆಂಬಲಕೆ ಕಡದಿರೆಂ । ವಿಶಿಷು ಭಟರೆಚ್ಚರಸ್ತ್ರಗಳ ॥೩॥ ಪಾರ್ಥ ಪರಿಯಂತೇಕೆ ಗೋಗ್ರಹಣದಲಿ ಬಿಡು ಸ । ಮರ್ಥಿಕೆಯ ತೋರಿ ದವರಹುದು ॥ ವ್ಯರ್ಥ ಕೌರವನ ದ್ರವ್ಯವ ತಿಂದು ಜೀವಿಸುವ । ಧೂರ್ತ ರೆಂದೆಚ್ಚನಭಿಮನ್ಯು ॥ ೪ ॥ ಭಳಿರೆ ಬಿಲ್ಲಾಳುತನ ಬಿಂಕದಲಿ ಶಿವ ನೀನು । ಇಳೆಯೊಳೆಣೆಯಿಲ್ಲೆಂದು ಪೊಗಳಿ ॥ ಕಲಶಭವನೆಚ್ಚಡಾ ಶರವನೆಲ್ಲವ ತರಿದು । ತಲೆಗೆಳಗು ಮಾಡಿದನು ಕ್ಷಣದಿ ॥ ೫ ॥

ಕಂದ

ಕಳವಳಿಸುತ್ತಭಿಮನ್ಯುವಿ । ಗಳುಕಿ ಮಹಾರಥರೆಲ್ಲರು ಮಿಗೆ ಪಿಂತಿರುಗಲ್ ॥ ತಳುವದೆ ಕೌರವನವರಂ । ಕಳಿದುರೆ ಜರೆಯಲು ಗುರುವಾ ಲೋಚಿಸುತೆಂದಂ ॥ ೧ ॥

ರಾಗ ಶಂಕರಾಭರಣ ತ್ರಿವುಡೆತಾಳ

ಏನ ಮಾಡುವುದಿನ್ನು ಪ್ರಳಯ ಕೃ ॥ ಶಾನುವಲ್ಲಾ ಪಾರ್ಥನ । ಸೂನು ಮತ್ತಿವನೊಳು ಸೆಣಸಲೀ । ಶಾನಗಳವೆ ॥ ೧ ॥ ರಾಯನುಸಿರುವ ನುಡಿಯು ಕುಂತದ । ಗಾಯದಂತೇ ಝೋಂಪಿಸಿ ॥ ಕಾಯವನು ಬೆರಸು ವುದು ಬದುಕಲು । ಪಾಯವಿಲ್ಲ ॥ ೨ ॥ ಮುಂದೆ ಪಸುಳೆಯ ಬಾಣ ಕೊಲುವುದು । ಹಿಂದೆ ನೃಪನ[illegible]ಗಾಢದ ॥ ಕೊಂದುಮಾತುಗಳಿರಿವುದಿದಕಾ । ನೊಂದ ಕಾಣೆ ॥ ೩ ॥ ಕರ್ಣ ಬಾ ಬಾ ವೃಷಭುಜಗಸು । ವರ್ಣ ನೀನೂ ಕಡೆಯದೆ ॥ ಪೂರ್ಣಶೌರ್ಯನ ಕಯ್ಯ ಧನುವನು । ಚೂರ್ಣಮಾಡೈ ॥ ೪ ॥

ವಾರ್ಧಿಕ

ಕಲಶಸಂಭವನೆಂದ ನುಡಿಗೆ ರವಿಜಂ ಪೇಳ್ದ । ಸುಲಭವೆ ಮಹಾ ರಥರ್ ಕದನಲಂಪಟರಿವ್ರು । ಕಲಹಕಿದಿರಾದ ಶಿಶುವಂ ಜಯಿಸಲಾರದೇ ಧನುವ ಖಂಡಿಪುದುಚಿತವೆ ॥ ಗೆಲಿದರದು ಗಮಪಿಕೆಯು ಲೋಕಸಾಮ್ಯದ ನುಡಿಯೆ । ಛಲದಂಕ ಸೀನೀಗ ನುಡಿದ ಮಾತಿನ ಬಗೆಗೆ । ಸಿಲುಕುವವ ನಾನಲ್ಲ ಬಲು ದೋಷಕೊಳಗಪ್ಪೆನೆಂತೆನಲು ಗುರು ನುಡಿದನು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕೇಳು ರವಿಸುತ ನಿನ್ನದೀ ವಾ । ಚಾಳತನವಿದು ಬೇಡವಿಂದಿಗೆ । ಕಾಳಗದೊಳೀ ಕುವರ ನಮ್ಮನು । ಬಾಳಗೊಡನು ॥ ೧ ॥ ಚಾಪವಿರಲವ

ನೊಡನೆ ಶಿವನಿಂ । ದಾಸ್ತ್ರವಿಕ್ಷ್ಯ ರಣವ ಜಯಿಸಲು । ತಾಪ ಬಿಟ್ಟೆಶಿ ಜವರ ಖಂಡಿಸು । ಪಾಪವಿಲ್ಲ ॥ ೨ ॥ ಭೂಮಿಪಾಲಕನುಳಿಯಲೋಸುಗ । ಕಾದಿಸಲು ನಿನಗಿಲ್ಲ ದೋಷವು । ಸ್ವಾಮಿಕಾರ್ಯದಿ ನಿಂದೆ ಸೋಕುವು । ದೇವಮಹಾತ್ಮ ॥ ೩ ॥

ಭಾಮಿನಿ

ಹಿಂದೆ ರವಿಸುತ ಗುರು ಕೃಪಾನುಜ । ರೊಂದು ಕಡೆಯಲಿ ಕಾದಿದರು ಮಿಗೆ । ಮುಂದೆ ದ್ರೋಣನ ಸುತಸಹಿತ ರಿಪುಭಟನ ಕೆಣಕಿದರು ॥ ನಿಂದು ದಿವ್ಯಾಸ್ತ್ರದಲಿ ಚಾಪವ । ನಂದು ಮುಕ್ಕಡಿಯಾಗಿ ಕಡಿಯಲು । ಮುಂದ ಹಾಸದಿ ತಿರುಗಿ ಕರ್ಣನ ಕಂಡನಭಿಮನ್ಯು ॥ ೧ ॥

ರಾಗ ಮಧ್ಯಮಾವತಿ ಅಷ್ಟತಾಳ

ಧೀರನಹುದೆಲವೊ । ಕರ್ಣನೆ ರಣ । ಶೂರನಹುದೆಲವೊ । ಧಾರಿಣಿಯೊಳಗಿದಿರಿಲ್ಲ ಸಂಗರವೀರ ॥ ಧೀರನಹುದೆಲವೊ ॥ ಪ ॥ ಚೋರನಂದದಿ ಹಿಂದೆ ನಿಂತೆ । ರೂಪು । ದೋರದೆ ಬಾಣವನಾಂತೆ । ಓರೆಯೊಳ್ ಧನುವ ಖಂಡಿಸಿದೆಯಿದಾ ವಿದ್ಯವ । ನಾರು ಕಲಿಸಿದರಯ್ಯ । ಲೋಕದಿ ಕೀರ್ತಿ । ಸಾರವ ಪಡೆದೆಯಯ್ಯ । ಕ್ಷತ್ರಿಯರೊಳು । ದಾರನೆಂತಾದೆಯಯ್ಯ ॥ ಕರ್ಣನೆ ರಣ । ಧೀರನಹುದೆಲವೊ ॥ ೧ ॥ ಕರದ ಚಾಪವು ಪೋದರೇನು । ಖಡ್ಗ । ವಿರಲು ಶೌರ್ಯವ ನೋಡು ನೀನು । ಶಿರವ ಚೆಂಡಾಡಿ ಶಾಕಿನಿ ಡಾಕಿನಿಯರಿಗೆ । ಪರಿತೋಷಬಡಿಸುವೆನು । ಸಂಗರದಿ ನೆ । ತ್ತರವನ್ನೆ ಕುಡಿಸುವೆನು । ಉಳಿದವರೆಮ । ಪುರಕೀಗ ಕಳುಹುವೆನು ॥ ಕರ್ಣನೆ ರಣ । ಧೀರನಹುದೆಲವೊ ॥ ೨ ॥

ಭಾಮಿನಿ

ಎನಲು ಲಜ್ಜಿತನಾಗಿ ಕರ್ಣನು । ಧನು ಮುರಿಯೆ ದ್ರೋಣಾದಿ ನಾಯಕ । ರನುವರದಿ ರಥ ಟೆಕ್ಕೆ ಸಾರಥಿ ಸಹಿತ ಕೆಡಹುತಲಿ ॥ ಕಣೆಗರೆಯಲತಿ ಧೈರ್ಯದಲಿ ನರ । ತನಯ ಖಡ್ಗವ ಕೊಂಡು ರಿಪುಕಾ । ನನವ ಸವರುತ ಬೀದಿವರಿದನು ಕಣನ ಚೌಕದಲಿ ॥ ೧ ॥

ರಾಗ ಪಂಚಾಗತಿ ಮಟ್ಟೆತಾಳ

ವೀರ ಪಾರ್ಥನಣುಗ ಖಡ್ಗ । ಧಾರೆಯಲಿ ವಿರೋಧಿಭಟರ । ಸೂರೆಗೊಂಡು ಪೊಯ್ದನಾಗ । ಬೇರೆ ರಥಿಕರ ॥ ಆರುಭಟೆಗೆ ನಿಲ್ಲದಹಿತ । ವಾರ

ಬಿಡದರುತಿರಲು ಕಂಡು । ಕೌರವೇಂದ್ರ ಜರೆದ ಸಮರ । ಶೂರರೆಲ್ಲರ ॥ ೧ ॥ ಸೋತನೆಂದು ಹೆಮ್ಮೆ ನುಡಿವಿ । ರೀತನಾರು ನಮ್ಮ ಸುಭಟ । ವ್ರಾತವನ್ನು ಸವರಿ ಬರುವ । ಭೀತಿಯಿಲ್ಲದೆ ॥ ಏತಕಿನ್ನು ನಿಮಗೆ ಶೌರ್ಯ । ವಾತಗೆರ ಗಿರೆನಲು ಭುಜಬ । ಲಾತಿಶಯರು ಮತ್ತೆ ಗಜ ವ । ರೂಥವಡರುತ ॥ ೨ ॥ ಘಡ ಘಡೆನುತ ವೀರ ಕರ್ಣ । ನಡೆಸಿಬರೆ ರಥಾಶ್ವಗಳನು । ಜಡಿವುತಪ್ಪಳಿಸಲು ಕಂಡು । ಕಡಿದನಸಿಯನು ॥ ಒಡನೆ ಖತಿಯ ಕೊಂಡು ರಥ ನೂ । ರಡಿಯ ನೂಕಿ ಪೋದಧಿನಜ । ಕಡುಗಿ ದಿವ್ಯಶರದಿ ಕರವ । ಪೊಡವಿಗಿಳುಹಿದ ॥ ೩ ॥ ಮರುಳು ಸೂತತನುಜ ಕೇಳು । ಕರವು ಪೋದಡೇನು ಭುಜದ । ಸಿರಿಗೆ ಕೊರತೆ ಬಪ್ಪುದುಂಟೆ । ಪರಿಕಿಸೆನುತಲಿ ॥ ಭರದಿ ರಥದ ಚಕ್ರಗೊಂಡು ತಿರುಹುತಿನಜಗೆರಗಿ ಬೊ । ಬ್ಬಿರಿದು ರಥ ತುರಂಗಮವ ನು । ಗ್ಗರಿದ ನಿಮಿಷದಿ ॥ ೪ ॥

ವಾರ್ಧಿಕ

ಮೆಟ್ಟಿದಂ ಗಜ ರಥ ತುರಂಗ ಕಾಲಾಳ್ಗಳಂ । ಕಟ್ಟಿದಂ ಕಾದುತಿಹ ಸುಭಟರಾಯುಧಗಳಂ । ಕುಟ್ಟಿದಂ ಷಡುರಥರನಡಹಾದ್ದು ಸಮರದೊಳ್ ಗಜರಿ ವೀರಾವೇಶದಿ ॥ ಮೆಟ್ಟಿದಂ ಕುರುಪತಿಯ ಸೇನಾಧಿನಾಯಕರ । ನೊಟ್ಟಿದಂ ನುಗ್ಗರಿವುತೆಮಪುರಕೆ ರಿಪುಬಲವ । ನಟ್ಟಿದಂ ಭೂಪ ಕೇಳದ್ಭುತ ವನೇನೆಂಬೆ ಸುರತತಿಯು ಬೆರಗಾಗಲು ॥ ೧ ॥

ಭಾಮಿನಿ

ಅರರೆ ಹರಿಯು ರಥಾಂಗವೆನಲ । ಬ್ಬರಿಸಿ ಹೊಯ್ದನು ಮತ್ತೆ ಕರ್ಣನು । ತರುಬುತಿಪ್ಪತ್ತೈದು ಬಾಣದೊಳೆಚ್ಚನರಿಭಟನ ॥ ಶರಮಯವು ಸರ್ವಾಂಗ ದಿಂದಿರ । ಲರಿಯುದಭಿಮನ್ಯುವಿನ ಝುಡಿತಕೆ । ಮರಣವನು ನೆನೆವಂತೆ ದುಶ್ಶಾಸನನ ಸುತ ತಡೆದ ॥ ೧ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ಎಲವೊ ಪಾರ್ಥನ ಸುತ ಕೇಳಿಂದು । ನಿನ್ನ । ತಲೆಯ ಕೊಂಬೆನು ನಿಮಿಷದೊಳೆಂದು ॥ ಪೊಳೆವ ಖಡ್ಗವ ಕೊಂಡು ಬರಲಾಗ । ಆತ । ನೊಳ ಪೊಕ್ಕು ಕಾದಿದನತಿ ಬೇಗ ॥ ೧ ॥ ಕರಹತಿಯೊಳಗೆ ಡೆಂಡಣಿಸುತ । ಧರೆ । ಗುರುಳಿ ಧಿಮ್ಮನೆ ಮತ್ತೆ ತಿರುಗುತ ॥ ಸರಿಯಾಗಿ ಹೆಣಗಿದರಿಬ್ಬರು । ಕಂಡು । ಸುರರಾಗ ಭಳಿಭಳಿರೆಂದರು ॥ ೨ ॥ ಅರಿಯ ಕೃಪಾಣದ ಗಾಯದಿ ।

ಶರ । ಹರಿಸುತಲೆದ್ದತಿ ಶೌರ್ಯದಿ ॥ ಶಿರಕೆರಗಲು ಧರೆಗುರುಳಿದ । ಕಂಡು । ಸುರಪನ ಮೊಮ್ಮ ವಿಶ್ರಮಿಸಿದ ॥ ೩ ॥

ರಾಗ ಸಾಂಗತ್ಯ ರೂಪಕತಾಳ

ಕಾಳಗಿಚ್ಚೆದ್ದು ಭಡಾಳಿಸಿ ನಿಲುವಂತೆ । ಬಾಲಕನಸ್ತ್ರತಲ್ಪದಲಿ ॥ ತೋಳದಿಂಬಿನೊಳಿರೆ ಕೌರವಾತ್ಮಜರಂದು । ಕಾಲೆಡೆಯಲಿ ಕೆಡೆದಿರಲು ॥ ॥ ೧ ॥ ಬಿಗಿದ ಹುಬ್ಬಿನ ಬಿಟ್ಟ ಕಂಗಳತ್ಯುಗ್ರದಿ । ಹೊಗರು ಮೋರೆಯು ಹೊಸ ಪರಿಯು ॥ ವಿಗಡ ಭಟಾಗ್ರಣಿ ಶಸ್ತ್ರಶಯನದಲ್ಲಿ । ಝುಗಝುಗಿಸುತಲಿರ್ದ ನೆಂದು ॥ ೨ ॥ ಸಾವ ಹರೆಯುವ ಬಾಲಗೆ ಶಿವ ಶಿವಯೆಂದು । ದೇವಾಳಿ ಮರುಗೆ ವಾಸವನ ॥ ಸಾವಿರಾಲಿಗಳಲ್ಲಿ ಒರತೆ ಪುಟ್ಟಿತು ಪೌತ್ರ । ಭಾವ ಸ್ನೇಹದೊಳಳಲಿದನು ॥ ೩ ॥ ಷಡುರಥರೊಂದಾಗಿಕೊಂಡೊಬ್ಬ ಹಸುಳೆಯ । ಹೊಡೆದರು ಹೇಸಿಗೆಗೊಳದೆ ॥ ಸುಡು ಸುಡು ಕೌರವಾದಿಗಳಾವ ವೀರರೆಂ । ದಡಿಗಡಿಗಾಡಲು ಸುರರು ॥ ೪ ॥ ಹಲವು ಗಜವೊಂದಾಗಿ ಸಿಂಹನ ಮರಿ ಯನ್ನು । ಕೊಲಿಸಿದಂತಾಯ್ತೆಂದನಿಂದ್ರ ॥ ಕಳುಹಿದನಪ್ಸರ ಸ್ತ್ರೀಯರ ಬೇಗದಿ । ಹೊಳೆವ ವೀರನ ಕರೆತರಲು ॥ ೫ ॥

ವಾರ್ಧಿಕ

ಶರದಿಂದುಮುಖಸಾಂದ್ರಭಾಸದಿಂ ತೋಷದಿಂ । ಸುರಚಿರಾಮಯ ರತ್ನಹಾರದಿಂ ಪೂರದಿಂ । ಪರಿಮಳಿಸ ದಿವ್ಯತರ ಗಂಧದಿಂ [illegible]ಂದದಿಂ ಪೊಂಗಲಶಕುಚಭಾರದಿ ॥ ಮೆರೆವಯೆಳೆಲತೆಯಂತೆ ಬಳಕುತಂ ತುಳುಕುತಂ। ಕಿರುನಗೆಯ ಮೊಗದ ಗುಣಶೀಲೆಯರ್ ಬಾಲೆಯರ್ । ಮೊರೆವ ಘನವಾದ್ಯ ರವತ್ವರಿತದಿಂ ಭರಿತದಿಂ ಸುರಗಣಿಕೆಯರ್ ಬಂದರು ॥ ೧ ॥

ರಾಗ ಸೌರಾಷ್ಟ್ರ ಆದಿತಾಳ

ತಂಗಿ ನೋಡೀ ಬಾಲನಂಗಸೌಂದರ್ಯವ । ಶೃಂಗಾರದಲಿ ಕಾಮ ನಲ್ಲೆ ॥ ಹಿಂಗಿತೀತನಿಗಾಗಿ ಸುರಪನ ಸಾವಿರ । ಕಂಗಳೊಳೊರತೆ ಪುಟ್ಟಿದವು ॥ ॥ ೧ ॥ ಹಸುಳೆಯೊಬ್ಬನನೆಂತು ಕಳುಹಿದನೆಮಜಾತ । ನಸಮಸಾಹಸರುಳ್ಳಾ ಹವಕೆ ॥ ಎಸೆವ ಮೆಯ್ಯೊಳು ನೋಡಲಿಂಬಿಲ್ಲ ಕಣೆಗಳು । ಮುಸುಕಿ ನಟ್ಟಿ ರುವ ಗಾಯಗಳು ॥ ೨ ॥ ಎನುತ ಮಾತಾಡುತ್ತಲಭಿಮನ್ಯುವೀರನ । ವಿನ ಯದಿ ಕರೆದೊಯ್ದು ಬೇಗ ॥ ಅನಿಮಿಷೇಂದ್ರನ ಸಭೆಯೊಳಗೆ ನಿಲಿಸಿದರು ।

ಘನ ಪರಾಕ್ರಮಿಯನ್ನು ಮುದದಿ ॥ ೩ ॥ ನೋಡಿ ದೇವೇಂದ್ರನು ಪೌತ್ರ ಸ್ನೆಹದಲಿ ಕೊಂ । ಡಾಡಿ ಪರಾಕ್ರಮಗಳನು ॥ ರೂಢಿಯೊಳೆಣೆಗಾಣೆನೆನುತ ಗದ್ದುಗೆಯೊಳು । ಚೋಡಾಗಿರ್ದರು ಮೋಹದಿಂದ ॥ ೪ ॥

ವಾರ್ಧಿಕ

ಕೇಳು ಜನಮೇಜಯಮಹೀಶನೆ ಧುರಪ್ರಳಯ । ಕಾಲನಂ ಮುರಿದೆವೆಂದುಬ್ಬೇರಿ ಕುರುವೀರ । ರಾಲಯವ ಪೊಗಲು ರವಿ ಜಾರಿದಂ ಬಾಲಕನ ಕಾಣಲರಿದೆಂಬಂದದಿ ॥ ಸೋಲವಿದು ಪಾಂಡವರಿಗಲ್ಲ ನಿಶ್ಚಯ ಪ್ರಳಯ । ಕಾಲ ಕೌರವಕುಲಕೆ ನಾಳೆ ಫಲುಗುಣನಿಂದ । ಸೋಲುಂಟೆ ಮಧ್ವಪತಿ ಕೃಷ್ಣನಾ ಭಕ್ತರ್ಗೆ ಸಿಗನುಸಿದ್ಧವಿದೆಂದನು ॥ ೧ ॥

ಅಭಿಮನ್ಯುಕಾಳಗವು ಮುಗಿದುದು

ಯಕ್ಷಗಾನ ಸೈಂಧವನ ವಧೆ

ಭಾಮಿನಿ

ಅವನಿಪತಿ ಕೇಳೈ ಕಿರೀಟಿಯು । ಕುವರನಳಿದುದ ಕೇಳಿ ದುಗುಡದಿ । ಪವನಸುತ ನಕುಲಾದಿಗಳು ಪೊಕ್ಕರು ನಿಜಾಲಯವ ॥ ಇವರ ಕಾಣುತೆ ಮಗನ ಸುದ್ದಿಯ । ನವನಿಪತಿ ಬೆಸಗೊಳಲು ಮಿಗೆ ವಾ । ಸವನ ಗದ್ದುಗೆಯೇರಿದನುಯೆನಲರಸ ಮರುಗಿದನು ॥ ೧ ॥

ರಾಗ ಆನಂದಭೈರವಿ ರೂಪಕತಾಳ

ಅಯ್ಯೋ ಮೋಹದ ಕಂದ । ಏನಾದೆಯೊ ಗುಣವೃಂದ ॥ ಕಯ್ಯಾರೆ ಕೊಲಿಸಿದಂ । ತಾದುದೆಯೆನ್ನಿಂದ ॥ ಅಯ್ಯೋ ॥ ಪ ॥ ಧೈರ್ಯದಿ ಸಿಂಹನ ಪೋಲುವ । ವೀರ ರಣಶೂರ ॥ ವೈರಿಗಳೆಂಬಡವಿಗೆ ದಾ । ವಾಗ್ನಿಯಾಕಾರ ॥ ಅಯ್ಯೋ ॥ ೧ ॥ ಭೈರವವಿಕ್ರಮ ನಿನ್ನುವ । ನೆಂತು ಮರೆತಿಹುದೀಗ ॥ ಸೈರಿಸುವೆನೆ ನಾ ಮನದಳಲನು । ಸವೆದುದೆ ಸಂಯೋಗ ॥ ಅಯ್ಯೋ ॥ ೨ ॥ ಗೌರೀಶನ ಸಖ ಪಾರ್ಥರು । ಬಂದು ಕೇಳಿದರೇನು ॥ ಪೌರುಷವಾಡುವೆನವರೊಳು । ಪತಿಕರಿಸುತ ನಾನು ॥ ಅಯ್ಯೋ ॥ ೩ ॥ ಕೌರವ ಕೊಂದಾ

ನೆನಲೊ । ನಾನೇ ಕೊಂದೇನೆನಲೊ ॥ ನಿವೃತ್ತಿಯ ಕಾಣೆನು ಹುತ । ವಾಹನನು ಪೊಗಲೊ ॥ ಅಯ್ಯೋ ॥ ೪ ॥

ಭಾಮಿನಿ

ಕುಲಿಶಹಸ್ತಿಯಲಿ ಕುಲಶಿಲೋಚ್ಚಯ । ವಿಳೆಗೆ ಕೆಡೆವಂದದಲಿ ಧರ್ಮಜ । ನಳಲಿ ಮೂರ್ಛಿತನಾಗಲಾ ಭೀಮಾದಿಗಳು ಮರುಗೆ ॥ ಕಳವಳವ ಕೊಳಲಂದು ವಾರ್ತೆಯ । ತಿಳಿದು ದ್ರುಪದಾತ್ಮಜೆ ಸುಭದ್ರೆಯ । ರಳುತ ಬಂದಡಗೆಡೆದರಿಮನಂದನನ ಸಭೆಯೊಳಗೆ ॥ ೧ ॥

ರಾಗ ನೀಲಾಂಬರಿ ಏಕತಾಳ

ಆವಲ್ಲಿ ಪೋದೆಯಭಿಮನ್ಯು । ಅಯ್ಯಯ್ಯೊ ಎನ್ನ । ಜೀವರತ್ನವೆ ಬಾ ಇನ್ನು ॥ ಜೀವದಾಸೆಗೆ ಬಾಲನ । ಸಂಗರಕಟ್ಟಿ । ತಾವಿಂದು ಕುಳಿತ ಜತನ ॥ ॥ ೧ ॥ ಅಳದಿರು ಧರ್ಮರಾಯ । ಸುಮ್ಮನಿರಯ್ಯ । ತಿಳಿದೆ ನಿನ್ನಯ ಬಗೆಯ ॥ ಹಲುಬಿದರಿನ್ನು ಬಾಹನೆ । ಮಡಿದಭಿಮನ್ಯು । ಘಳಿಲನೆನ್ನಯ ಮರಿಯಾನೆ ॥ ॥ ೨ ॥ ಅಕಟ ನೀನೇಕೆ ಪುಟ್ಟಿದೆ । ಪಾಪಿಯುದರದಿ । ನಕುಲ ಭೀಮರ್ಗೆ ಜನಿಸದೆ ॥ ಸುಕೃತವಿಲ್ಲ ನಿನ್ನಯ್ಯಗೆ । ಅದರಿಂದ ಬಲು ಕಂ । ಟಕರಾದ ರವರ್ ನಿನಗೆ ॥೩॥ ಧುರವನ್ನು ಹೊಗಬಲ್ಲನೆ । ಷಡುರಥರೊಡ । ನಿರಿದಾಡ ತಕ್ಕವನೆ ॥ ಧರೆಯ ವೈಭವಕೋಸುಗ । ಎನ್ನಣುಗನ । ತ್ವರಿತದಿಂದಟ್ಟಿದ ರಾಗ ॥ ೪ ॥ ಕರುಣಿಗಳೆಂಬರೆಲ್ಲರು । ಈ ಧರ್ಮರಾಯ । ಕೊರಳ ಕೊಯ್ಯುವದನರಿಯರು ॥ ತರಳರೀ ದ್ರೌಪದೇಯರ । ಗಜಪುರ ಪೊಗಿಸಿ । ಹೊರಿಸು ರಾಜ್ಯದ ಭೂಭಾರ ॥ ೫ ॥

ಭಾಮಿನಿ

ಅರಸ ಜನಮೇಜಯನೆ ಕೇಳಂ । ಬುರುಹನೇತ್ರೆಯ ವಚನಶಸ್ತ್ರಗ । ಳಿರದೆ ಕೊಂಡವು ಭೂಪನಂಗವನೇನ ಬಣ್ಣಿಪೆನು ॥ ಉರಿವ ಕಿಚ್ಚಿಗೆ ಘೃತವ ನಿಕ್ಕಿದ । ಪರಿಯದಾಯ್ತನಿತರೊಳು ತಿಳಿದಾ । ವರಮ ವೇದವ್ಯಾಸ ಬಂದನು ಜನಪನಿದ್ದೆಡೆಗೆ ॥ ೧ ॥

ರಾಗ ಶಂಕರಾಭರಣ ಏಕತಾಳ

ಬಂದ ವೇದವ್ಯಾಸಮುನಿಗೆ । ವಂದಿಸಿ ಭಕ್ತಿಯೊಳಿರಲು । ಕಂದು ಮೊಗದ ನೃಪನ ಶಿರವ । ನಿಂದೆತ್ತಿ ನುಡಿದ ॥ ೧ ॥ ತಿಳಿದು ಬಂದೆ ನಿಮ್ಮ ದುಃಖಂ । ಗಳನೆಲ್ಲವ ಪೇಳ್ವುದೇನು । ನಳಿನಭವನು ಬರೆದ ಬರೆಹಂ । ಗಳ

ಮಿಾರ್ವರಾರು ॥ ೨ ॥ ಆಡಸಿದಾಪತ್ತಿನಲಿ ಧೈರ್ಯ । ಪಿಡಿದಿರ್ಪುದಲ್ಲದೆ ಬಾಯು । ಬಿಡಲೆದ್ದು ಬಾಹನೆ ಇಂದು । ಮಡಿದಭಿಮನ್ಯು ॥ ೩ ॥ ಗುಣರೂಪ ದಿಂದಲಿಹವು । ವನಿತೆ ಪುತ್ರ ಗೋಗೃಹಂಗಳ್ । ಗುಣವು ತೀರೆ ಕಾಕ ತ್ರಯವು । ಗುಣಭೇದ ನೋಡೈ ॥ ೪ ॥ ಹಿಂದೆ ಕಂಪನೆಂಬ ನೃಪಗೆ । ಕಂದ ನೋರ್ವ ಹರಿಯೆಂಬಾತ । ನಂದು ಮಡಿಯಲಿಂತು ದುಃಖಿಸೆ । ಬಂದ ನಾರದ ॥ ೫ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಧಾರಿಣೀಶ್ವರ ಕೇಳು ಮೃತ್ಯುವ । ನಾರು ಜಯಿಸುವರುಂಟು ಜಗದೊಳ । ಗಾರಿಗಾದರು ತಪ್ಪಲರಿಯದ । ಪಾರವೆಂದ ॥ ೧ ॥ ಸತ್ಯವಚನವ ಕೇಳಿ ಭೂಪತಿ । ಮತ್ತೆ ನುಡಿದನು ದೇವಋಷಿಯೊಳು । ಮೃತ್ಯುದೇವತೆ ಯಾರು ವಿವರಿಸೆ । ನುತ್ತ ಬಿಡದೆ ॥ ೨ ॥ ಜನಪ ಕೇಳಾ ಬ್ರಹ್ಮದೇವನ । ಘನತರದ ರೋಷದಲಿ ಜನಿಸಿದ । ಮನಸಿಜಾರಿಯು ಮುತ್ತುದಿಸಿದಳು । ವನಿತೆ ಮೃತ್ಯು ॥ ॥ ೩ ॥ ಅವಳ ತೆತ್ತಿಗರಾರು ಮುಂದಿಯು ॥ ವಿವರಿಸಲು ಷಡ್ವರ್ಗರುಚಿಗಳಿ । ದವಳ ಬಳಗವಿದೆಂದು ತಿಳಿವುದು । ಭುವನದೊಳಗೆ ॥ ೪ ॥ ಧರೆಯನಾಳುವ ವೀರ ಷೋಡಶ । ಧೊರೆಗಳವಳ್ಗೊಶವಾಗಿಹರು ವಿ । ಸ್ತರಿಸಲೇನೆಂದಭಯ ಗೊಡುತಲಿ । ಭರದಿ ನುಡಿದ ॥ ೫ ॥

ಭಾಮಿನಿ

ಕಂಪನಣುಗನ ಕಥೆಯ ಕೇಳುತ । ತಂಪುಗೊಳಿಸಲು ಮತ್ತೆ ಬಾಲನ । ನೆಂಪುಗೊಂಡಳಲುತ್ತ ನುಡಿದನು ವ್ಯಾಸಮುನಿಯೊಡನೆ ॥ ಸೊಂಪು ಗುಣ ದಲಿ ಶೌರ್ಯ ತಾಪದ । ಕೆಂಪಿನಲಿ ಸುತಗೆಣೆಯ ಕಾಣೆನು । ಕಂಪನಣುಗನ ಪರಿಯಿದಲ್ಲೆಂದನು ಯುಧಿಷ್ಠಿರನು ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಜನಪ ಕೇಳ್ ಜನನವೆ ಲಯಬೀಜ ಮರಣವು । ಜನನಬೀಜವ ತೋರಿ ಕೆಡುವ ॥ ತನುವಿನಾನಂದಕ್ಕೆ ಮನಮಾಡದಿರ್ಪುದು । ನಿನಗೆ ನೀ ತಿಳಿಯೆಂದ ಮುನಿಪ ॥ ೧ ॥ ಬುಧನಭಿಮನ್ಯುವೆಂದರಿತುಕೊ ಮನದಲ್ಲಿ । ಕುದಿಗೊಳ್ಳ ಬೇಡ ನೀ ಬರಿದೆ ॥ ಒದಗಿ ಪುಟ್ಟಿದನರ್ಜುನಗೆ ಸುತನಾಗುತ್ತ । ಪದಿನಾಲ್ಕು ವರುಷವೆಯವಧಿ ॥ ೨ ॥ ದೇಹಾಭಿಮನ್ಯುವೋ ಜೀವವೋ ದಿಟ ಜಡ । ದೇಹ ಕೆಟ್ಟರೆ ಹೋದುದೇನು ॥ ದೇಹ ಶಾಶ್ವತವಲ್ಲ ಮಡಿದುಹೋದವರೊಳು ।

ಮೋಹವನಿಟ್ಟಳಲದಿರು ॥ ೩ ॥ ಎಂದು ಸುಜ್ಞಾನಬೋಧೆಯ ಪೇಳಿ ವ್ಯಾಸ ಮು । ನೀಂದ್ರನಾಶ್ರಮಕಡಿಯಿಡಲು ॥ ಕಂದ ವಾಸವನಲ್ಲಿ ಪೋದನರಿತು ಮು । ಕುಂದ ತಾ ತಿರುಹಿದ ರಥವ ॥ ೪ ॥ ತರಣಿ ತಾ ಮುಳುಗಿದನಾಲಿಸು ಫಲುಗುಣ । ತೆರಳುವ ಶಿಬಿರಕೆಂದಿನಲಿ ॥ ಧುರದ ಸಂಗತಿಯೆಲ್ಲ ನಾಳೆ ಯೆಂದಚ್ಯುತ । ತಿರುಗಿಸಿದನು ಬೇಗ ರಥವ ॥ ೫ ॥

ಭಾಮಿನಿ

ಹರಿಧನಂಜಯರಿತ್ತ ಬರುತಿರೆ । ಸರಸವಾಡುತ ಪಾರ್ಥನನು ಕಂ । ಡರಿನಗೆಯೊಳಾಲೋಚಿಸಿದನಸುರಾರಿ ಚಿತ್ತದಲಿ ॥ ತರಳನಳಿದುದ ಸುರಪ ತನುಜನಿ । ಗರುಹಬೇಕೆನುತಾಗ ಮೆಲ್ಲನೆ । ನರಗೆ ಪೇಳ್ದನು ಜಲವ ಮುಳುಗುವುದೆನುತ ವಹಿಲದಲಿ ॥ ೧ ॥

ವಾರ್ಧಿಕ

ಇಂತುಸಿರುತಾಕ್ಷಣವೆ ಸುರಪತನುಜಾತನಂ । ಕಂತುಪಿತ ಕೂಡಿ ಕೊಳಕಿಳಿದು ವಿಜಯನೊಳೆಂದ । ಸಂತಸದಿ ಜಲವ ಮುಳುಗಿದ ಬಳಿಕ ಕಡೆಗೆ ಮುಂದೇಳ್ವರ್ ಯಾರ್ ನೋಳ್ಪುದೆಂದು ॥ ಪಂಥವೆಸಗುತ ನೀರ ಮುಳುಗಿದಾ ಮೇಲೆ ಹರಿ । ಯಂತರಂಗದಿ ಶರವ ಬಗಿದೆದ್ದು ವೇಗದಿಂ । ನಿಂತರ್ಜುನನೊಳೆಂದ ಕೇಳು ಫಲುಗುಣ ನಿನ್ನ ಸುತ ಮರಣಕಯ್ದನೆನುತ ॥

ಕಂದ

ಇಂತಚ್ಯುತನೊರೆದಾಪವ । ಸಂತಸದಿಂ ಮುಳುಗೆ ಪಾರ್ಥನೆದ್ದಾ ಕ್ಷಣದೊಳ್ ॥ ನಿಂತಾಲಿಸಿ ಬಲು ದುಗುಡದಿ । ಕಂತುಪಿತನ ಕರೆದೆಬ್ಬಿಸಿ ನುಡಿದಂ ಜವದೊಳ್ ॥ ೧ ॥

ಭಾಮಿನಿ

ಪಂಚಬಾಣನ ಪಿತನೆ ಕೇಳ್ ಗಗ । ನಾಂಚಲದಿ ನುಡಿ ಕೇಳಿ ಮನದಿ ಪ । ಳಂಚಿಸುವುದಿನ್ನಾಯ್ತು ವಞ್ಚಿಸಬೇಡ ಮುರವೈರಿ ॥ ಚಂಚಲವು ಬಲು ವಾಗಿ ಚಿತ್ತವ । ಮಿಂಚಿಹೋಗುವುದೆನುತ ನುಡಿಯಲು ಮುಂಚೆ ತಿಳಿದುದು ಸುತನ ಮರಣದ ಶಕುನ ಪಾರ್ಥನಿಗೆ ॥ ೧ ॥

ರಾಗ ಬಿಲಹರಿ ಅಷ್ಟತಾಳ

ತಿಳಿದುದಾಕ್ಷಣ ಪುತ್ರಶೋಕಲಕ್ಷಣಗಳು । ಫಲುಗುಣನಿಗೆ ಹೆಚ್ಚಿ ತಂದು ಸಂತಾಪ ॥ ಕಳವಳಗೊಂಡತಿ ಭಯದಿಂದಲುಸಿರಿದ । ನಳಿನನಾಭ

ನೊಳು ಕಂಬನಿಯು ತುಂಬುತಲಿ ॥ ೧ ॥ ಸೆಳೆದೊಡಲೊಳಗುರಿತಾಪ ಹೆಚ್ಚಿದೆ
ಧೈರ್ಯ । ಕಳವಳಗೊಡುತಿದೆ ಕಡು ಭಯವಾಗಿ ॥ ತಳುವದಿಂತಾಗುವ
ಕಾರಣವೇನೆಂದು । ಒಳವ ಪೇಳಯ್ಯ ವಾಸುದೇವ ಸಂಜೀವ ॥ ೨ ॥ ಕಂದ
ನಿರವ ಕಾಣಲಾಪೆನೊ ಕೌರವರ್ । ಕೊಂದರೆಂಬುದ ಸಾ ಕೇಳಿದೆ ಕಿವಿ
ಯೊಳಗೆ ॥ ಇಂದಿನ ಚಕ್ರವ್ಯೂಹದಿಂದ ಬಾಲಕನಿಗೆ । ಬಂದ ಕಂಟಕವಲ್ಲ
ದಿಲ್ಲ ನಿಶ್ಚಯವು ॥ ೩ ॥ ತಂದೆ ಕೇಳೀಗ ಧೃತಿಗುಂದದೆ ನಡೆ ನಿನ್ನ । ಕಂದನ
ನಾರೊಯ್ದರೆಂದು ಕಂಸಾರಿ ॥ ಬಂದು ಪಾರ್ಥನ ರಾಜಮಂದಿರದೊಳು
ಬಿಟ್ಟು । ನಿಂದಿರದಯ್ದಿದ ಸಿಂಧುರವರದ ॥ ೪ ॥

ವಾರ್ಧಿಕ

ಸುರನಗರಿ ನಡುಗಿತು ಸುರೇಶ್ವರಂ ಪನ್ನಗಾ । ಭರಣನಂ ನೆನೆನೆನೆದು
ಯಮಪುರದಿ ಗಜಬಜಿಸಿ । ಸರಕು ತೆಗೆದುದು ಮೃತ್ಯು ಪೊಕ್ಕಳು ಮಹೇಶ್ವ
ರನ ಮರೆಯನತಿ ಭೀತಿಯಿಂದ ॥ ಬಿರಿದು ರಂಜಿಸಿ ಸಕಲ ಸೇನೆ ಪರಿವಾರ
ಗಳು । ಸಿರಿಯರಸನೇ ಗತಿಯೆನುತ್ತಿರಲು ಬಳಿಕಿತ್ತ । ನರನ ದುಮ್ಮಾನದಿಂ
ತ್ರೈಜಗಂ ಬೆದರಿಸಲ್ಕುರುಸೇನೆ ತಲ್ಲಣಿಸಿತು ॥ ೧ ॥

ಭಾಮಿನಿ

ಧಾರಿಣೀಶ್ವರ ಕೇಳಿದಿರು ಬಹ । ನಾರಿಯರ ರತುನಾರತಿಗಳನು ।
ವೀರ ಕೊಳ್ಳದೆ ಬಂದು ಧರ್ಮಜಗೆರಗುತ್ತಿಂತೆಂದ ॥ ಭೂರಿ ಬಲ ನೆರೆದಿರಲು
ತನ್ನ ಕು । ಮಾರನಾವೆಡೆ ಕಾಣೆನೀ ಪರಿ । ವಾರದೊಳಗೆನಲಳುತ ಬಂದೆರಗಿ
ದಳು ಸೌಭದ್ರೆ ॥ ೧ ॥

ರಾಗ ನವರೋಜು ಆದಿತಾಳ

ಸುತನಿಂದೆಲ್ಲಿಗೆ ಪೋದ । ಪ್ರಾಣ । ರತುನ ತಾನೇನಾದ ॥ ಪತಿಯೆ
ನೀ ತೋರೆಂದು । ಬಿದ್ದ । ಳತಿ ದುಃಖದೊಳು ನೊಂದು ॥ ೧ ॥ ರಣಸಾಹಸಿ
ಗಳಿದ್ದ । ಎ । ನ್ನಣುಗನಟ್ಟಿದರಿಂದು ॥ ಋಣವು ತೀರಿತೆಯೆಂದು । ನರ ।
ವನಿತೆ ಕೂಗಿದಳಂದು ॥ ೨ ॥ ಬಾ ಮಗನೆ ಪಿತನೆಡೆಗೆ । ಬಹು । ಪ್ರೇಮವ
ತೋರಿಸು ನಮಗೆ ॥ ನೀ ಮುನಿದು ಪೋಗುವರೆ । ರಣ । ಕಾಮಿತನಾಗ್ಯಗ
ಲುವರೆ ॥ ೩ ॥ ಸ್ಮರಕೋಟಿಶೃಂಗಾರ । ಸ । ಚ್ಚರಿತ ಸಂಗರಧೀರ ॥ ಅರಿಗಜ
ಸಿಂಹಾಕಾರ । ಮರೆ । ದಿರಲೆಂತು ಸುಕುಮಾರ ॥ ೪ ॥

ಭಾಮಿನಿ

ಅರಸ ಕೇಳಿಂತಳುವ ಕಾಂತೆಯು । ಸುರಿವ ಕಂಬನಿಯನ್ನು ಸೆರಗಿಂ । ದೊರೆಸಿ ಸಂತಾಪದಲಿ ತಾ ಬೆದೆಬೆಂದು ಕಡು ನೊಂದು ॥ ತರಹರಿಸಿ ಬಾಯಾರಿ ಕನ್ನೆಯು । ತರಳನಾವೆಡೆ ಹೇಳು ಹೇಳೈ । ಹಿರಿದು ಬಳಲಿಸಬೇಡ ವೆಂಧಗ್ರಜನ ಬೆಸಗೊಂಡ ॥ ೧ ॥

ರಾಗ ನೀಲಾಂಬರಿ ಝಂಪೆತಾಳ

ಪತಿಯು ಮಡಿದಿಹ । ಸತಿಯು ನಾಯಕ । ರತುನವಿಲ್ಲದ । ಪದಕ ದೇವತಾ ॥ ಸ್ತುತಿಗಳಿಲ್ಲದ । ಕಾವ್ಯರಚನೆಯು । ಸುತನು ತೋರದ । ಸಭೆ ಯಿದೇನಯ್ಯ ॥ ೧ ॥ ಬರಲು ಇದಿರಲಿ । ಬಂದು ಮೋಹದಿ । ಕರದಿ ಮೈಯ್ಯನು । ತಡವರಿಸುತಲಿ ॥ ಸರಳ ಗಾಯವ । ಕಂಡು ಮರುಗುವ । ತರಳನೆಲ್ಲಿಗೆ । ಪೋದನಗ್ರಜ ॥ ೨ ॥ ಭೀಮಸೇ ಮಹಾ । ದ್ರುಪದ ನಕುಲ ನಿ । ಸ್ಸೀಮ ಸಾತ್ಯಕಿ । ಮುಖ್ಯರಿದ್ದೆನ್ನ ॥ ಕಾಮಧೇನುವ । ಕಳುಹಿ ಕೊಟ್ಟಿರೆ । ಕ್ಷೇಮವಾಯಿತೇ । ನಿಮ್ಮ ಮನಸಿಗೆ ॥ ೩ ॥ ವಿಗಡರಿನಿಬರು । ಇದ್ದು ದುರ್ಗವ । ಹೊಗದೆ ಹೊರಗಣ । ಮಾರಿ ಹೊರಗಿಂದ ॥ ಅಗಲಲೆನುತಲಿ । ಕಳುಹಿದೀರಲ್ಲ । ಮಗನ ಕಾಣದೆ । ಮನಸು ನಿಲ್ಲದು ॥ ೪ ॥

ಭಾಮಿನಿ

ನುಡಿದು ಫಲವೇನಕಟ ತಾಸಿ । ನ್ನೊಡೆಯರಿಲ್ಲದ ವಸ್ತುವಾದೆನು । ಪಡೆದ ಪುಣ್ಯವಿದೆಂದು ಬಿಸುಸುಯ್ದಳಲಿ ಮೂರ್ಛಿಸುತ ॥ ಹೊಡಕರಿಸಿ ಕೊಂಡೆದ್ದು ರೋಷದಿ । ಕಡೆಯ ವಡಬಾನಲನ ತೆರದಲಿ । ನುಡಿದ ಕೊಂದವ ನಾರು ಮಗನನು ನಿಜವ ಹೇಳೆಂದ ॥ ೧ ॥

ರಾಗ ಭೈರವಿ ಏಕತಾಳ

ಶರದ ಪಂಡಿತನೆಂಬವನೊ । ಸಂ । ಗರದಲಿ ರಿಪು ಸೈಂಧವನೊ ॥ ತರಣಿಸುತನೊ ಸೌಬಲನೊ । ವಿ । ಸ್ತರಿಸೈ ಯಾರೆಂಬುದನು ॥ ೧ ॥ ಅಶ್ವತ್ಥಾಮನೊ ಕೃಪನೊ । ಕಲಿ । ದುಶ್ಶಾಸನನೆಂಬವನೊ ॥ ಶಾಶ್ವತ ಭೂರಿಶ್ರವನೊ । ಪೇ । ಳೀಶ್ವರನಾಣೆ ಕೊಲ್ಲುವೆನು ॥ ೨ ॥ ಕೃತವರ್ಮನೊ ಬಾಹ್ಲಿಕನೊ । ಭೂ । ಪತಿ ಶಲ್ಯನೊ ತತ್ಸುತನೊ ॥ ಕೃತಕದಿ ಕೊಂದವ ನಾರು । ಪೇ । ಳತಿಶಯದಲಿ ದಯೆದೋರು ॥ ೩ ॥

ರಾಗ ದೇಶಿ ಝಂಪೆತಾಳ

ಕೇಳಯ್ಯ ದೇವೇಂದ್ರಜಾತ ವಿಖ್ಯಾತ ॥ ಪ ॥ ನೀನು ಸಮಸಪ್ತಕರ ಧುರಕೆ ಪೋಗಲು ಭೀಮ । ಸೇನ ಸಾತ್ಯಕಿ ನಕುಲ ದ್ರುಪದಾದಿ ನೃಪರು ॥ ೧ ॥ ಚಕ್ರವ್ಯೂಹವ ಪೊಗದೆ ನೊಂದು ಬಂದರು ಬಳಿಕ । ವಿಕ್ರಮದೊಳಭಿಮನ್ಯು ಪೋದನಾಹವಕೆ ॥ ೨ ॥ ಅರಸನಾತ್ಮಜರ ನೂರ್ವರನು ಕೊಂದಾ ರಣದಿ । ಒರಗಿಸಿದ ಮಿಗೆ ಮೂರಕ್ಷೋಹಿಣೀ ಬಲವ ॥ ೩ ॥ ತರಳನಿಗೆ ಬೆಂಬಲಕೆ ಪೋದವರ ಬಾಗಿಲೊಳು । ಹರನ ವರವುಂಟೆನುತ ತಡೆದ ಸೈಂಧವನು ॥ ೪ ॥ ವೀರಾಧಿವೀರ ಷಡುರಥರೊಡನೆ ಹೊಯ್ದಾಡಿ । ಏರಿದನು ಮಗನು ವಾಸವನ ಗದ್ದುಗೆಯು ॥ ೫ ॥ ತರಳನಿಗೆ ಮರಣವನು ತಂದವನೆ ಸೈಂಧವನು । ಅರುಹಲೇನೆನಲು ಕಿಡಿಗೆದರಿದನು ಪಾರ್ಥ ॥ ೬ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅರರೆ ಪ್ರಳಯದ ರುದ್ರನೆನೆ ಹೂಂ । ಕರಿಸುತಡಿಯಿಡುತಾಡು ಗಚ್ಚುತ । ನರನು ವೀರಾವೇಶದಲಿ ಭೂ । ವರನಿಗೆಂದ ॥ ೧ ॥ ಹುಡುಗನನು ಕೊಂದವನ ಜೀವಕೆ । ಹಿಡಿಯಿದಕೊ ಮಿಗೆ ಸಂಚಕಾರವು । ನುಡಿದು ತಪ್ಪಿದರಿದಕೆ ಕೇಳ್ ನಿ । ನ್ನಡಿಗಳಾಣೆ ॥ ೨ ॥ ನಾಳೆ ಬೈಗಿಂದೊಳಗೆ ರಿಪುವನು । ಸೀಳುವೆನು ಸೀಳದಡೆ ಬಲು ನರ । ಕಾಳಿಯಾಗಲಿ ತನಗೆ ಭಾಷೆಯು । ಕೇಳು ಭೂಪ ॥ ೩ ॥ ಹರಿಹರರ ಮರೆಹೊಗಲಿ ವಾಣೀ । ವರನ ಕರದ ಕಮಂಡಲದೊಳವ । ನಿರದೆ ಹುದುಗಲಿ ಸೈಂಧವನ ಸಂ । ಹರಿಸದಿರೆನು ॥ ॥ ೪ ॥ ರವಿಯು ಮುಳುಗದ ಮುನ್ನ ರಿಪು ಸೈಂ.। ಧವನ ನಾಳಿನೊಳೊರೆಸದಡೆ ನೀ । ಗುವೆನು ದೇಹವನಗ್ನಿಕುಂಡದಿ । ಭುವನಪಾಲ ॥ ೫ ॥

ಭಾಮಿನಿ

ಕೇಳು ನೃಪ ನರನೆಂದ ಶೌರ್ಯ ಭ । ಡಾಳತನ ನುಡಿಯಾಲಿಸುತ್ತ ಮ । ರಾಳವಾಹನನಯ್ಯನತಿ ಹಿಗ್ಗುತಲೆ ನಡೆತಂದು ॥ ಲೀಲೆಯಲಿ ಕಂಡಾಗ ಪಾರ್ಥನ । ಮೇಲೆ ಕರುಣಾರಸವ ಬೀರುತ । ಶ್ರೀಲತಾಂಗಿಯ ರಮಣ ನುಡಿದನು ಮಧುರವಚನದಲಿ ॥ ೧ ॥

ರಾಗ ನವರೋಜು ಏಕತಾಳ

ಮೆಚ್ಚಿದೆ ಮೆಚ್ಚಿದೆ ಪಾರ್ಥ । ನಿನ್ನ । ಹೆಚ್ಚಿನ ಭಾಷೆಯು ಸ್ವಾರ್ಥ ॥ ॥ ಪ ॥ ವೈರಿ ಸೈಂಧವಭಟನ । ಸಂ । ಸಾರವು ತೀರಿತು ವಚನ ॥ ವಿಾರು

ವರ್ ಯಾರು ಸುರಾಸುರರೊಳು ರಘು । ವೀರನ ಬಾಣವಲ್ಲವೆ ನಿನ್ನಯ ನುಡಿ ॥ ಮೆಚ್ಚಿದೆ ॥ ೧ ॥ ಖೂಳ ಸೈಂಧವಭಟನ । ನೀ । ಸೀಳಲು ಪೋಗಿಹ ಮಗನ ॥ ಘಾಲಾಂಬಕನೊಳು ಪಡೆದಂತಾಯಿತು । ನಾಳಿಗೆ ಸರ್ವರ ಶೋಕ ನಿವಾರಣ ॥ ಮೆಚ್ಚಿದೆ ॥ ೨ ॥

ಭಾಮಿನಿ

ಇಂತು ಗೋವಿಂದನು ಕಿರೀಟಿಯು । ಸಂತವಿಸಲಾ ಪುತ್ರಶೋಕವ । ನಾಂತು ಮಗುಳಾಧರಿಸಲಾರದೆ ಬಂದು ಸೌಭದ್ರೆ ॥ ಕಂತುಪಿತನಂಘ್ರಿಯಲಿ ಬಿದ್ದು ಮ । ಹಾಂತವಾಗಿ ಪ್ರಲಾಪಿಸಿದಳದ । ನೆಂತು ಬಣ್ಣಿಪೆ ಕೇಳು ಜನಮೇಜಯಮಹೀಪತಿಯೆ ॥ ೧ ॥

ರಾಗ ರೇಗುಪ್ತಿ ಆದಿತಾಳ

ಅಣ್ಣ ನಾ ಮರೆವುದೆಂತು । ಎನ್ನಯ ಮುದ್ದು । ಚಿಣ್ಣನ ಋಣವು ಸಂತು ॥ ಪುಣ್ಯಶ್ಲೋಕನೆ ನಿನಗಳಿಯನೆನಿಸುತೆನ್ನ । ಕಣ್ಣಮುಂದಿರುತಿರ್ದನು । ಅಭಿಮನ್ಯು ॥ ೧ ॥ ಹದಿನಾಲ್ಕು ವರುಷದೊಳು । ಕಂಟಕವು ಬಂ । ದೊದಗಲೆಂದಪ್ಪರೊಳು ॥ ಪದುಮಭವನು ಫಣೆಯೊಳಗಿಂತು ಬರೆದನು । ಹದ ಮೀರಿ ಹೋಯಿತಲ್ಲ । ಈಶ್ವರ ಬಲ್ಲ ॥ ೨ ॥ ನೀವೆಲ್ಲರಿದ್ದಿರಲ್ಲ । ಎನ್ನ ಋಗನಿ । ಗೀ ವಿಧಿಯಾಯಿತಲ್ಲ ॥ ಆವ ಪ್ರಕಾರದಿ ಸೈರಿಸಿಕೊಳಲಿನ್ನು । ದಾವಾಗ್ನಿಯನು ಹೊಗಲೋ । ಬಾಳಿರಲೋ ॥ ೩ ॥

ರಾಗ ಮಧ್ಯಮಾವತಿ ಏಕತಾಳ

ಕೇಳವ್ವ ತಂಗಿ ನೀ ಮರುಗದಿರಿನ್ನು । ಪೇಳುವೆ ಸೈರಿಸಬೇಕು ದುಃಖವನು ॥ ಘಾಲದಿ ಕಮಲಜ ಬರೆದಕ್ಕರವನು । ತಾಳದೆ ಮೀರ್ವರ್ ಯಾರುಂಟು ಕರ್ಮವನ ॥ ೧ ॥ ಮಗನಿಗೆ ಮರಣವ ತಂದ ಖೂಳನನು । ಸಿಗಿಸುವೆ ನಾಳೆ ನೀ ನೋಡು ಭಾಷೆಯನು ॥ ಮೃಗರಾಜನೊಳು ಮುನಿದ ಭವು ಬಾಳುವುದೆ । ಹಗರಣವನು ಬಿಟ್ಟು ತೆರಳು ದುಃಖಿಸದೆ ॥ ೨ ॥

ವಾರ್ಧಿಕ

ನಳಿನಾಕ್ಷನಿಂತೆಂದು ತಂಗಿಯನೊಡಂಬಡಿಸಿ । ಮೊಳಗಿಸಿದನಾ ಪಾಂಚಜನ್ಯಮಂ ಕೋಟಿ ಸಿಡಿ । ಲುಲಿವವೋಲವ್ವಳಿಸಲಾ ನರಂ ಕೂಡೆ ವರ ದೇವದತ್ತವನೂದಲು ॥ ಘುಳು ಘುಳು ಧ್ವನಿ ಛಡಾಳಿಸುತೆಂಟು ದಿಕ್ಕಿ

ನೊಳು । ಕಳವಳಂ ಕೊಂಡು ಮೈಮರೆಯುಲು ಜಗತ್ತ್ರಯಂ । ಬಳಿಕ ಕುರು ಸೇನೆ ತಲೆಗೆಳಗಾದುದಾ ರಾತ್ರೆ ಫಲುಗುಣನ ಭೀತಿಯಿಂದ ॥ ೧ ॥

ರಾಗ ನಾದನಾಮಕ್ರಿಯೆ ಮಟ್ಟೆತಾಳ

ಕೇಳು ಕೇಳು ಧರಣಿಪಾಲಕ । ಇರುಳು ಬೊಂ । ಬಾಳದೀವಿಗೆಗಳ ಪಿಡಿವು । ತಾಳು ಹರಿದುದೆಂಟು ದೆಸೆಗೆ ॥ ಕೇಳು ॥ ಪ ॥ ಎಲೆಲೆ ಕಳ್ಳರವರು ನಮ್ಮ । ಹೊಳಲ ಹೊಕ್ಕು ರಾತ್ರಿ ಬರಿದೆ । ಧಳಧುಳಿಯನು ಮಾಡುತಿಹರು ಕೊಲೆಗಡುಕರು ॥ ಪಾಂಡುಸುತರು । ನಿಲದೆ ಕವಿಯೆನುತ್ತ ಸುಭಟರು । ಹೊಕ್ಕು ತಮ್ಮ । ದಳದಿ ಹೊಯ್ದು ಹಳಚುತಿರ್ದರು । ಕೌರವನ್ನ । ಬಳಿಗೆ ಬಂದರೋಡಿ ರಥಿಕ । ರಳವಿಗೊಡುತಲಹಿತಬಲದಿ ॥ ಕೇಳು ॥ ೧ ॥ ಕಡಿವಣವನು ಕರಿಯ ಮುಖಕೆ । ತೊಡಿಸಿದಂತೆ ಘಂಟೆಗಳಿಗೆ । ನಿಡುನೊಗಂಗಳನ್ನು ಕಟ್ಟಿ । ಬಿಡದೆ ಕಿವಿಯೊಳ್ ಕೀಲನಿಕ್ಕಿ । ಝಡಿಯುತಿರ್ದರೇನನೆಂಬೆನು ॥ ಕುದುರೆಗಳನು । ಒಡಿದು ನಿಲಿಸಿ ಹೆಕ್ಕರಿಕೆಯನು । ಹೂಡುತಾಗ । ಲೊಡನೆ ನೂಕಿ ಸರಳ ಹೂಡಿ । ಕಡುಗಿ ಸಮರಗೆಯ್ದರಾಗ ॥ ಕೇಳು ॥ ೨ ॥ ಈತ ಪಾರ್ಥನೀತ ನಕುಲ । ನೀತ ದ್ರುಪದನೀತ ಭೀಮ । ನೀತನೆಲೆ ಘಟೋತ್ಕಚನು ಭು । ಜಾತಿಶಯದ ವೀರರೆನುತ । ಭೀತಿಯಿಂದ ಹೊಕ್ಕು ಹೊಯ್ದರು ॥ ಕೌರವನನು । ದೂತರೆಲ್ಲ ಮುತ್ತಿಕೊಂಡರು । ಬಳಿಕ ಸೇನೆ । ಧಾತುಗೆಟ್ಟು ತಮ್ಮೊಳ್ ತಾವೆ । ಘಾತಿಸಿದುದನೇನನೆಂಬೆ ॥ ೩ ॥

ಭಾಮಿನಿ

ಅರಸ ಕೇಳತಿ ಭಯದಿ ಭಟರ । ಬ್ಬರಿಸುತಿರಲಾ ವೇಳೆಯಲಿ ಬಂ । ದರುಹಿದರು ಕೌರವಗೆ ಬೇಹಿನ ಚರರು ಸೈಂಧವನ ॥ ಶಿರವ ಕೊಂಬನು ನಾಳೆ ಫಲುಗುಣ । ನುರಿಯ ಹೊಗುವನು ಕೊಳ್ಳದಿರ್ದಡೆ । ಸ್ಥಿರವಿದೆನಲಾ ನುಡಿಗೆ ಭಯಗೊಂಡನು ಜಯದ್ರಥನು ॥ ೧ ॥

ರಾಗ ಸುರುಟಿ ಏಕತಾಳ

ಕೇಳು ಕೌರವೇಂದ್ರ । ಭಾಗ್ಯವಿ । ಶಾಲ ಸುಗುಣಸಾಂದ್ರ ॥ ಬೀಳುಗೊಂಬೆನೀ ದೇಶವ ನಮಗೆ ಪ । ಲಾಯನಕಪ್ಪಣೆ ಕೊಡಿಸೈ ಶೀಘ್ರದಿ ॥ ೧ ॥ ನರನ ಕುಮಾರಕನ । ಕೊಂದವ । ನಿರದೆ ದುಃಶ್ಯಾಸನನ ॥ ತರಳನು ನಾವ್ ಮಾಡಿದುದೇನೈ ಸುರ । ವರನಣುಗನಿಗೆ ವಿರೋಧವನಿಂದಿಲಿ ॥ ೨ ॥

ಹರನ ಶರದ ಬಲವು । ಮತ್ತಾ । ಮುರಮಥನನ ಬಲವು ॥ ಇರುತಿರೆ ನರನ ನುಡಿಯು ಸುಳ್ಳಾಗದು । ಬರಿದೊಂದಪಕೀರ್ತಿಯು ತನಗೊದಗಿತು ॥ ೩ ॥ ಶರದ ಪಂಡಿತನಿಂದ । ತನಗೀ । ಪರಿಯಾಯಿತು ಮುಂದಾ ॥ ಹರನ ಮರೆಯ ಹೊಕ್ಕರು ತೀರದು ನಾಳೆ । ಶಿರವನು ಕಾಯ್ವರ ಕಾಣೆ ಮೂಲೋಕದಿ ॥ ೪ ॥

ರಾಗ ಕೇದಾರಗೌಳ ಅಷ್ಟತಾಳ

ಎಂದತಿ ಭಯಗೊಳಲಾಗ ಕೌರವರಾಯ । ನೆಂದ ಸೈಂಧವನೃಪಗೆ ॥ ಇಂದಿದಕಂಜುವುದೇಕೆ ಭೀಮಾರ್ಜುನ । ರಿಂದಲೇನಾಗುವುದು ॥ ೧ ॥ ಭೀಮನ ಭಾಷೆಯೇನಾಯಿತು ತನ್ನಯ । ಕಾಮಿಸಿಗಾಗಿ ಪೇಳ್ದ ॥ ಸಾಮರ್ಥ್ಯವೇಕೆ ತೋರನು ಬಿಡು ಭಯವನು । ನೀ ಮರುಳಾದೆಯಲ ॥ ೨ ॥ ಗರುಡಿಯಾಚಾರ್ಯನ ಬಲವುಂಟು ವಜ್ರಸಂ । ಜರವಾಗಿ ನಮಗಿಂದಿನಲಿ ॥ ಪೊರೆವನು ನಾವಾತಗರುಹುವುದೆಂದಾಗಿ । ಲ್ಲರು ಬಂದರವನೆಡೆಗೆ ॥ ೩ ॥

ಭಾಮಿನಿ

ವಸುಧೆಪತಿ ಕೇಳಾಗ ಕೌರವ । ನೆಸೆವ ಕರ್ಣ ಕೃಪಾದಿಗಳು ಬಂ । ದಸಮಬಲ ದ್ರೋಣಂಗೆ ಕಾಣಿಸಿಕೊಳಲು ತವಕದಲಿ ॥ ಉಸಿರಿದನು ಗುರು ಬಂದಿರೇಕೀ । ನಿಶಿಯೊಳೆನಲಾ ಕೌರವೇಂದ್ರನು । ಬಸವಳಿದು ತಿಳುಹಿದನು ಬಿಸುಸುಯ್ಯುತ್ತ ಕಲಶಜಗೆ ॥ ೧ ॥

ರಾಗ ತುಜಾವಂತು ಝಂಪೆತಾಳ

ಗರುಡಿಯಾಚಾರ್ಯ ಕೇಳಯ್ಯ ಗುರುವರ್ಯ । ಅರುಹುವೆನು ಸೈಂಧವಗೆ ಬಂದ ದುರ್ಘಟನ ॥ ಪ ॥ ನಾಳೆ ರವಿ ತೊಲಗದಾ ಮುನ್ನ ಸೈಂಧವನೃಪನ । ಸೀಳುವೆನು ಸೀಳದಿರಲಗ್ನಿಕುಂಡದಲಿ ॥ ಬೀಳುವೆನೆನುತ್ತ ಭಾಷೆಯ ತೊಟ್ಟ ಫಲುಗುಣನು । ಮೇಲೇನುಪಾಯ ಕಂಡುದನರುಹಿರೆಮಗೆ ॥ ೧ ॥ ಆ ನದೀಸುತನ ಮೇಲೆಮಗೆ ಪರಮಾಪ್ತಜನ । ನೀನಲ್ಲದಿಲ್ಲವೈ ನಿಶ್ಚಯವು ನೋಡೆ ॥ ಏನಾದರೊಂದು ಬಗೆಯೊಳು ಸೈಂಧವನ ಕಾವ । ಜಾಣತನ ನಿಮ್ಮದಲ್ಲದೆ ಪಥವ ಕಾಣೆ ॥ ೨ ॥ ಎನುತ ಪಾದದಿ ಬಿದ್ದ ಕೌರವನ ಪಿಡಿದೆತ್ತಿ । ವಿನಯದಲಿ ಪೇಳಿದನು ಶಸ್ತ್ರಪಂಡಿತನು ॥ ಜನಪ ಕೇಳಾರು ಕೊಲ್ಲುವರು ಕಾಯುವರೆಲ್ಲ । ಘನತೆ ದೈವಾಧೀನವಲ್ಲದಿನ್ನುಂಟೆ ॥ ೩ ॥

ರಾಗ ಶಂಕರಾಭರಣ ಏಕತಾಳ

ಕೌರವರಾಯ ಕೇಳಯ್ಯ । ಶೌರಿಯ ತಂತ್ರವಿದೆಲ್ಲ । ವಿಾರುವ ರಾರುಂಟು ಜಗದಿ । ಭೂರಿ ಮಹಿಮೆಯ ॥ ೧ ॥ ಆತ ಪಾಂಡುಸುತರ ಭಾರ । ವಾತುಕೊಂಡಿರ್ಪನು ನರನು । ಸೋತುಪೋಪುದುಂಟೆ ಬಯಲ । ಮಾತಿನೆಂದನು ॥ ೨ ॥ ಕೇಳು ಕರ್ಣ ಬೊಮ್ಮವನ್ನು । ಕೇಳಬಂದಿವೆ ನಾ ವಿನ್ನು । ನಾಳಿನ ಕಾಳಗಕೇನು । ಹೇಳರು ಬರಿದೆ ॥ ೩ ॥ ಎಂದು ಚಿಂತಿಸುವ ಕೌರ । ವೇಂದ್ರಗೆ ಧೈರ್ಯವ ದ್ರೋಣ । ನಂದು ಪೇಳ್ವ ಬಿಡು ಬಿಡಿಂಥ । ಬಂದ ಭಯಂಗಳ ॥ ೪ ॥ ಜಡಜವ್ಯೂಹವನ್ನು ರಚಿಸಿ । ಬಿಡದೆ ಕಾಯ್ವೆ ಸೈಂಧ ವನನು । ವೃಡನೆ ಬಂದಡ್ಡೈಸಿದರೆಯು । ತಡೆದುಕೊಂಬೆನು ॥ ೫ ॥

ಭಾಮಿನಿ

ಅರಸ ಕೇಳಿಂತೆಂದು ಕೌರವ । ರರಸನನು ಸಂತವಿಸಿ ನುಡಿದನು । ಧುರಕೆ ಬರಲಿ ಸಮಸ್ತ ಬಲಸಹ ಷಡುರಥಾದಿಗಳು ॥ ಮರೆದು ಕಳೆ ಯಿನ್ನಂಜಿಕೆಯನೆನೆ । ಹರಿದುದತ್ತಲು ಸಭೆಯು ಲಕ್ಷ್ಮೀ । ವರನು ಪಾರ್ಥನಿ ಗರುಹಿದನು ದ್ರೋಣನ ಪರಾಕ್ರಮವ ॥ ೧ ॥

ರಾಗ ಕಾಂಭೋಜ ಅಷ್ಟತಾಳ

ಕೇಳು ಧನಂಜಯ ಬಗೆಯ । ರಿಪು । ಪಾಳಯದೊಳಗಾದ ಪರಿಯ ॥ ಖೂಳ ಸೈಂಧವ ಭೀತಿಗೊಳಲು ಕೌರವ ಬಂದು । ಕೋಲಪಂಡಿತನಿಗೆ ಪೇಳಿದ ಹದನವ ॥ ೧ ॥ ವನಜವ್ಯೂಹವ ನಾಳೆ ರಚಿಸಿ । ಸೈಂಧ । ವನ ಕಾವೆನೆನುತ ಘೀಕರಿಸಿ ॥ ಮನಸಿಜಾರಿಯ ಹೊಗಗೊಡೆನೆಂದು ದ್ರೋಣಾದ್ಯ । ರನುವಾದ ರಿದಕೊ ಸಂಗರವಸದಳ ನಾಳೆ ॥ ೨ ॥

ಭಾಮಿನಿ

ಮುರಹರನ ನುಡಿ ಕೇಳಿ ಫಲುಗುಣ । ನರುಹಿದನು ನಿನ್ನೊಲುಮೆ ಯಿರುತಿರೆ । ಧುರದಿ ಬಗೆವೆನೆ ದ್ರೋಣ ಪದ್ಮವ್ಯೂಹಗೀಹಗಳ ॥ ಪರಿಕಿಸೆನು ತಾಯುಧದ ಶಾಲೆಗೆ । ನರನು ಬಂದರ್ಚಿಸಿದನಾ ಶಂ । ಕರನ ಪಾಶುಪತಾದಿ ಶರಗಳನುಗ್ರಮಂತ್ರದಲಿ ॥ ೧ ॥

ರಾಗ ಸಾವೇರಿ ಏಕತಾಳ

ಪೂಜೆಯ ಮಾಡಿದನು । ಪಾರ್ಥನು । ಬೀಜಮಂತ್ರಾಕ್ಷರದಿ ॥ ಪೂಜೆಯ ॥ ಪ ॥ ಧನುಶರ ಕೈದುಗಳ । ಇರಿಸುತ್ತ । ವನಜಾಕ್ಷಿ ದುರ್ಗೆ

ಯನು ॥ ವಿನಯದಿ ಪ್ರಾರ್ಥಿಸುತ । ನವವಿಧ । ಘನತರ ಭಕ್ತಿಯಲಿ ॥ ಪೂಜೆಯ ॥ ೧ ॥ ಧೂಪದೀಪಂಗಳಲಿ । ನವಮಾಂ । ಸೋಪಫಲಂಗಳಲಿ ॥ ಶ್ರೀಪರಮೇಶ್ವರಿಯ । ಮಂತ್ರಕ । ಲಾಪವ ಜಪಿಸುತಲಿ ॥ ಪೂಜೆಯ ॥ ೨ ॥

ಭಾಮಿನಿ

ಇಂತು ಪೂಜಿಸಿ ಬಳಿಕ ನರನೇ । ಕಾಂತಧ್ಯಾನದಿ ಮಲಗಿರಲುಮಾ । ಕಾಂತನೊಲವಾದುದನು ಮಿಗೆ ಕನಸಿನಲಿ ತಾ ಕಂಡು ॥ ಸಂತಸದೊಳೆದ್ದುದಯದಲಿ ಶ್ರೀ । ಕಾಂತಗಭಿನಮಿಸುತ್ತೊರೆದ ತ । ನ್ನಂತರಂಗದೊಳಾದ ಸ್ವಪ್ನದ ಸೊಬಗನೆಲ್ಲವನು ॥ ೧ ॥

ರಾಗ ಮಧ್ಯಮಾವತಿ ಏಕತಾಳ

ಲಾಲಿಸಿ ಕೇಳು ಮುರಾರಿ ಮುಕುಂದ । ಲೀಲೆಯಿಂದಿರುಳಾದ ಸ್ವಪ್ನದಾನಂದ ॥ ಲಾಲಿಸಿ ॥ ಪ ॥ ದೇವ ನಿಮ್ಮಡಿಗಳ ಕಂಡೆನು ಶಿವ ಮಹಾ । ದೇವನ ಸನ್ನಿಧಿಗೆ ಪೋಗಿರಲಾಗಿ ॥ ಆ ವಿಭುವಿನಪ್ಪಣೆಯಿಂದ ಸರಸಿಯೊಳು ಗಾಂ । ಡೀವಧನುವ ಪಿಡಿದು ಕಲಿತೆ ವಿದ್ಯೆಯನು ॥ ಲಾಲಿಸಿ ॥ ೧ ॥ ಈಶನೆಡೆಗೆ ಬರಲೆನಗಾಗ ಮಂತ್ರೋಪ । ದೇಶವಾದುದು ಸರಳ ಬಿಡು ತೊಡುವಂತೆ ॥ ಶ್ರೀಸದಾಶಿವನನುಗ್ರಹದಲಿ ಪೂರ್ಣವಾಗಿ । ಪಾಶುಪತವು ವಶವರ್ತಿಯಾದುದನು ॥ ಲಾಲಿಸಿ ॥ ೨ ॥ ಎನಲಾ ಮಾತಿಗೆ ನಸುನಗುತಲಿಂತೆಂದನು । ಘನ ರಾಜಕಾರ್ಯಕಾಗಿ ಹರನೊಲವಾಯ್ತು ॥ ನಿನಗಿನ್ನು ಸರಿಯಾರು ವೈರಿ ಸೈಂಧವನನ್ನು । ರಣದಿ ಸಂಹರಿಸುವ ವ್ಯಾಪಾರವೆಂದನು ॥ ಲಾಲಿಸಿ ॥ ೩ ॥

ಭಾಮಿನಿ

ಅರಸ ಕೇಳ್ ಬಳಿಕಾ ಯುಧಿಷ್ಠಿರ । ಧರಣಿಪತಿ ನೇಮದಲಿ ನೆರೆದುದು । ಕರಿ ತುರಗ ರಥಸಹಿತ ಸೈನಿಕವಪರಿಮಿತವಾಗಿ ॥ ಮೊರೆವ ನಾನಾ ವಾದ್ಯಘೋಷದಿ । ಧುರಕೆ ಸನ್ನಹವಾಗುತಿರಲಾ । ಶರದ ಪಂಡಿತ ಬಲಿದನಿತ್ತಲು ಪದ್ಮವ್ಯೂಹವನು ॥ ೧ ॥

ದ್ವಿಪದಿ

ಅಖಿಳ ಗಜ ರಥ ಹಯದ ಸಾಲುಗಳ ನಿಲಿಸಿ । ವಿಕಟ ಶಕಟವ್ಯೂಹ ದುರ್ಗವನು ರಚಿಸಿ ॥ ೧ ॥ ಅವರೊತ್ತಿನಲಿ ಮಕರವ್ಯೂಹವನು ಮಾಡಿ । ಅದಕೆ ದ್ರೋಣಾಸನಾದಿಗಳ ಬಲಗೂಡಿ ॥ ೨ ॥ ಬಳಿಕ ಯೋಜನವೈದರಳತೆ

ಗಳವಡಿಸಿ । ಹೊಳೆವ ಚಕ್ರವ್ಯೂಹಕೋಟಿಯನು ರಚಿಸಿ ॥ ೩ ॥ ಕಾಂಭೋಜ ಭೂಪ ಮೊದಲಾದ ರಥಿಕರನು । ಇಂಬುಗೊಳಿಸಿದನುರು ಕಿರೀಟಪತಿಗಳನು ॥ ೪ ॥ ತುರಗವೈವತ್ತಾರು ಕೋಟಿಗಳ ನಿಲಿಸಿ । ಕರಿಘಟೆಗಳೆಂಟು ಲಕ್ಷವನದಕೆ ಬೆರಸಿ ॥ ೫ ॥ ಸುರುಚಿರ ವರೂಥವೈವತ್ತು ಸಾವಿರವ । ಭರದಿ ಕಾಲಾಳು ನಿಲಿಸಿದನಪರಿಮಿತವ ॥ ೬ ॥ ನಿಯುತಾಯು ಮೊದಲಾದ ನೃಪರ ಕಾಹಿನಲಿ । ಜಯಕೆ ಹಂಸವ್ಯೂಹ ರಚಿಸಿ ವಿನಯದಲಿ ॥ ೭ ॥ ಹತ್ತುಸಾವಿರ ಮಂಡಲೇಶ್ವರರ ಬರಿಸಿ । ಮತ್ತದಕೆ ಸಮಸಪ್ತಕರ ಸೈನ್ಯವೆರಸಿ ॥ ೮ ॥ ಚಪಲ ಗಜರಥವೆಂಟುಕೋಟಿ ಬಲದಿಂದ । ವಿಪುಲ ಪದ್ಮವ್ಯೂಹವೆಸಗೆ ನಲವಿಂದ ॥ ೯ ॥ ಚಿತ್ತರದ ಸೂಚಿವ್ಯೂಹವ ವಿರಚಿಸಿದನು । ಸುತ್ತವಲಯದೊಳಗತಿರಥರ ನಿಲಿಸಿದನು ॥ ೧೦ ॥

ವಾರ್ಧಿಕ

ಸೋಮದತ್ತಸುದತ್ತ ಭೂರಿಶ್ರವಾದಿಗಳ । ಕ್ಷೇಮಧೂರ್ತಿಕ ಶಲ್ಯನೃಪ ಶ್ರುತಾಯುಧರನುರಿ । ಭೀಮವಿಕ್ರಮ ದೀರ್ಘಬಾಹು ವೃಷಸೇನ ಕೃಪ ಮುಖ್ಯರಾದತಿರಥರನು ॥ ಆ ಮಹಾ ಪದ್ಮಸೂಚಿವ್ಯೂಹವಲಯದೊಳ್ । ತಾ ಮುದದಿ ನಿಲಿಸಿ ತನ್ಮಧ್ಯದೊಳ್ ಕಲಿ ಸಿಂಧು । ಭೂಮಿಪತಿಯಂ ಕಾಯ್ದು ಕೊಂಡಿರ್ದರೇನೆಂಬೆ ಹರನಿಗರಿದೆನೆ ದುರ್ಗವು ॥ ೧ ॥

ಭಾಮಿನಿ

ಭೋರಿಡಲು ಬಹು ವಾದ್ಯತತಿ ರಣ । ಧೀರ ದ್ರೋಣನು ಶಕಟವ್ಯೂಹ । ದ್ವಾರದಲಿ ಮಿಗೆ ಬಂದು ನಿಂದನು ಬಲವನೀಕ್ಷಿಸುತ ॥ ಚಾರಕರನಟ್ಟಿದನು ಯಮನ ಕು । ಮಾರನಿದ್ದಲ್ಲಿಗೆ ಮಹಾರಣ । ಶೂರರಿದ್ದರು ಕೇಳುತಾ ಕ್ಷಣ ಪವನಜಾದಿಗಳು ॥ ೧ ॥

ರಾಗ ಆಹೇರಿ ಝಂಪೆತಾಳ

ರಣಕೆ ಸನ್ನಹವಾದರೆಲ್ಲ । ಭೀಮ । ತ್ರಿಣಯಸಖ ಪಾರ್ಥ ಮೊದಲಾದ ಪಟುಭಟರು ॥ ರಣಕೆ ॥ ಪ ॥ ಅರಸನೆಡವಂಕದಲಿ ವೀರ ಧೃಷ್ಟದ್ಯುಮ್ನ । ಧರಣಿಪ ವಿರಾಟ ಕುಂತೀಭೋಜ ನಕುಲ ಸಂ । ಗರವಿಜಯ ಸಾತ್ಯಕಿ ಘಟೋತ್ಕಚ ಮಹಾವೀರ । ರಿರದೆ ಬಲವಂಕದೊಳಗಿರಲು । ಮುಂದ । ಕುರವಣಿಸಿದರು ಫಲುಗುಣಾಚ್ಯುತಾದಿಗಳು ॥ ರಣಕೆ ॥ ೧ ॥ ಖಂಡೆಯ ಧನುರ್ಬಾಣ ಚಕ್ರಶಕ್ತಿಯ ಪಾಶ । ಪಿಂಡಿವಾಳ ಕೃಪಾಣ ಕುಂತ

ತೋಮರಗಳು । ದ್ದಂಡ ಶಲ್ಲೆಯು ಪರಶು ವಜ್ರ ಮುದ್ಗರಗಳಂ । ಚಂಡ ಭುಜಬಲರಾಂತರಾಗ । ರಣವ । ಕಂಡು ನಡೆದರು ಬಹಳ ಪಟುಭಟರು ಬೇಗ ॥ ರಣಕೆ ॥ ೨ ॥ ಭೇರಿ ಮೃದಂಗ ರಣಕಹಳೆ ಕೊಂಬು ಡಮಾಮಿ । ಭೋರಿಡುವ ನಾನಾ ಸುವಾದ್ಯರಭಸದಲಿ । ಧುರ । ಶೂರರೀಳ್ವಬ್ಬರಕೆ ನಡುಗಿತಾ ಕುರುಸೇನೆ । ಧಾರಿಣಿಪ ನುಡಿದನಚ್ಯುತಗೆ । ಪದವ । ನಾರಾಧಿಸುತ ನಿಂತು ಪರಮಪಾವನಗೆ ॥ ರಣಕೆ ॥ ೩ ॥

ರಾಗ ಭೈರವಿ ಝಂಪೆತಾಳ

ತರಳನಿವ ಘುಂದುಗಾಣದೆ ಪೇಳ್ದ ನುಡಿಯನ್ನು । ನೆರೆ ನಡೆಸಿ ರಕ್ಷಿಸುವ ಭಾರ ನಿಮಗೈಸೆ ॥ ೧ ॥ ಹಗೆಯು ಕೊಲ್ಲದಡಗ್ನಿ ಹೊಗುವ ಮತ್ತಾ ಪಾರ್ಥ । ಬಗೆಯೊಳಯ್ವರ ಜೀವಕಧಿಪತಿಯು ನೀನು ॥ ೨ ॥ ಎಂದು ಕರುಣಾಳುಗಳ ದೇವನೊಳು ಬೇಡಿಕೊಳ । ಲಂದು ಧರ್ಮಜಗಭಯವಿತ್ತ-ನಸುರಾರಿ ॥ ೩ ॥

ಭಾಮಿನಿ

ಪೊಡವಿಪತಿ ಕೇಳ್ ಮನದ ಚಿಂತೆಯ । ಬಿಡು ಜಯದ್ರಥಖೂಳನನು ತಲೆ । ಗಡಿದು ಕೆಡಹುವೆ ಕಾಲದೆಸೆಯುಲಿ ಷಡುರಥರ ಗೆಲಿದು ॥ ಮಡುಹುವೆನು ರಿಪುಬಲವನೆನಲಾ । ಕಡಲಶಯನನ ಪದಕೆ ವಂದಿಸಿ । ಮೃಡನ ಶರವನು ಜಪಿಸಿದನು ನರನಧಿಕ ಭಕ್ತಿಯುಲಿ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಮಣಿಯು ರಥವನ್ನು ಬಲವಂದು ಮೇಲಿರ್ಪ । ಹನುಮಂತನನು ಕಂಡು ನಮಿಸಿ ॥ ತ್ರಿಣಯಮಿತ್ರನ ಪಾದರಜವ ಶಿರದೊಳಾಂತು । ಧನು ಶರಗಳನು ಕೈಗೊಂಡ ॥ ೧ ॥ ಕವಚವನುರೆ ತೊಟ್ಟು ಬಾಹುರಕ್ಷೆಯ ನಾಂತು । ತವಕದಿ ಧರ್ಮಜಗೆರಗಿ ॥ ದಿವಿಜವ್ರಜಕೆ ಕಯ್ಯ ಮುಗಿದು ರಥವನೇರಿ । ಬವರಕೆ ನಡೆದನಾ ಪಾರ್ಥ ॥ ೨ ॥ ದೇವದುಂದುಭಿ ಮೊಳಗಿದುವಾಗ ನರನ ಗಾಂ । ಡೀವಧನುವಿನ ಝೇಂಕೃತಿಗೆ ॥ ಆ ವೈರಿ ಮೋಹರ ತಲ್ಲಣಗೊಳುವಂತೆ । ದೇವೇಂದ್ರಸುತ ನಡೆತಂದ ॥ ೩ ॥

ರಾಗ ಶಂಕರಾಭರಣ ಮಟ್ಟೆತಾಳ

ನರನು ಬರುವ ಭರವ ಕಾಣುತರಸನನುಜನು । ಕೆರಳಿ ಬೇಗ ಧನುವ ಕೊಂಡು ಧುರಕೆ ನಡೆದನು ॥ ಸರಳ ಮಳೆಯ ಕರೆವುತಿರಲು ಕಂಡು

ಪಾರ್ಥನು । ಉರಿಯುನುಗುಳುತಾಗ ಘೋರ ಶರವ ಕೊಂಡನು ॥ ೧ ॥ ಧುರದೊಳಿವನ ಕೊಂದರಣ್ಣ ಭೀಮಸೇನನ । ಹಿರಿದು ಭಾಷೆ ಕೆಡುವುದೆನುತ ಲಿಂದ್ರನಂದನ ॥ ಎರಡು ಶರದಿ ತೇರುಚಾಪಗಳನು ಖಂಡಿಸಿ । ಉರವ ಡೋರುಗಳೆದನಾಗ ಧುರದಿ ಹೊರಳಿಸಿ ॥ ೨ ॥

ಭಾಮಿನಿ

ಅರಸ ಕೇಳ್ ದುಶ್ಶಾಸನನ ಭೀ। ಕರಿಸಿ ಮುಂದೊತ್ತುತಲೆ ಕಂಡನು। ಗುರುವರನ ಘನತರದ ಶಕಟವ್ಯೂಹದ್ವಾರದಲಿ ॥ ತೆರಹುಗೊಡನಿವ ನೆಂದು ನರನ । ಬ್ಬರಿಸಿ ರಥವನು ನೂಕಿದರೆ ಹೂಂ । ಕರಿಸಿ ತಡೆವುತ ದ್ರೋಣನಾ ಫಲುಗುಣನೊಳಿಂತೆಂದ ॥ ೧ ॥

ರಾಗ ದೇಶಿ ಅಷ್ಟತಾಳ

ಎಲವೊ ಪಾರ್ಥನೆ ಕೇಳು ನಿನಗೆ ದೈವ । ಬಲವು ಸಂಘಟಿಸಿಹುದೆ ನುತ ನೀ । ಛಲದಿ ಗರ್ವಿಸದಿರು ಕಣಾ ॥ ೧ ॥ ನಾಳೆ ಸೈಂಧವನೃಪನ ಸಂಗರದೊಳು । ಸೀಳುವೆನು ದಿಟವೆನುತ ನುಡಿದು । ಬ್ಬಾಳುತನವನು ತೋರಿಸು ॥ ೨ ॥ ಆಳು ಕೂಡಿದೆ ಚೂಣಿಯೊಳಿದರೊಳೊಂ । ದಾಳ ಗೆಲಿದರೆ ಗೆಲವು ನಿನ್ನದು । ಸೋಲು ತನಗಿಂದೆನುತಲಿ ॥ ೩ ॥ ಕನಲುತೆಚ್ಚನು ಬಾಣ ಸಂತತಿಯನ್ನು । ಘನತರದಿ ಕಿಡಿಯಿಡುತ ಪಾರ್ಥನ । ತನುವಿನಗ್ರದಿ ಚುಚ್ಚಿತು ॥ ೪ ॥ ಗುರುವಿನಸ್ತ್ರಸಮೂಹವ ಸವರುತ್ತ । ಮರಳಿ ಕಾಣಿಕೆ ಮಾಡಿ ಪೇಳ್ದನು । ಸುರಪಸುತನತಿ ವಿನಯದಿ ॥ ೫ ॥ ಅಂಬಿಗಂಬನು ತೊಡುವೆ ನೀವ್ ಗುರುಗಳು । ಡೊಂಬಿಯೇತಕೆ ಬರಿದೆ ಸೈಂಧವ । ನೆಂಬ ಖೂಳನ ತೋರಿಸಿ ॥ ೬ ॥ ಮರುಳೆ ಕೇಳೆಮ್ಮ ನೀ ಗೆಲ್ದಮೇಲಾತ । ನಿರವ ತೋರುವೆನೆನುತ ಚಾಪದ । ತಿರುವ ಕಡಿದನು ದ್ರೋಣನು ॥ ೭ ॥

ಭಾಮಿನಿ

ನರನು ಮಂತ್ರಾಸ್ತ್ರಗಳ ತೊಡುತಿರ । ಲರಿವುತಚ್ಯುತ ಕೆರಳಿದನು ಫಡ। ಮರುಳೆ ಗುರುವನು ಗೆಲುವರುಂಟೇ ಬೇಡು ಪದಕೆರಗಿ ॥ ಧುರವ ಜೈಸೆಂ ದೆನಲು ಧನು ಕೆಳ । ಗಿರಿಸಿ ರಥದಿಂದಿಳಿದು ಬೇಗದಿ । ಶಿರವ ಚಾಚುತಲಾ ಧನಂಜಯ ನುಡಿದ ದ್ರೋಣನಿಗೆ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ತಿಳಿಯಲೆಮ್ಮವರ ಜೀವನ ನಿಮ್ಮಿಂದ । ಉಳಿಯಬೇಕತಿ ದಯದಿ ॥

ಸಲಹಿಕೊಂಡರು ಲೇಸು ಕೊಂದರು ಲೇಸೆಂದು । ಫಲುಗುಣನರುಹಿದನು ॥ ॥ ೧ ॥ ತರಳತನದೊಳಿಪ್ಪಾಗೆಮ್ಮಯ ಬೊಪ್ಪನು । ತೆರಳಿದ ಸುರಪುರಕೆ ॥ ಹಿರಿದು ಬದುಕಿದೆವು ನಿಮ್ಮಿಂದ ಭೀಷ್ಮರಿಂ । ದರುಹುವುದೇನು ಮತ್ತೆ ॥ ೨ ॥ ಘಾಸಿಯಾದೆವು ಜೂಜಿನಿಂದಲಾರಣ್ಯನಿ । ವಾಸವ ಮಾಡಿದೆವು ॥ ಭಾಷೆಯಿ ದೊಂದನು ಕಾಯಬೇಕೆನುತಲಿ । ವಾಸವಸುತ ಪೇಳ್ದನು ॥ ೩ ॥ ನೀವು ಹೂಣಿಗರಾಗಿ ರಿಪುವ ಕಾಯ್ದಿರ್ದಡೆ । ನಾವು ನಿಲ್ಲೆವು ಧುರಕೆ ॥ ಈವು ದಭಯವೆನೆ ನಗುತಲಾ ದ್ರೋಣನು । ದೇವೇಂದ್ರಸುತಗೆಂದನು ॥ ೪ ॥ ಕಂದನಶ್ವತ್ಥಾಮ ಹುಸಿ ನೀನೆ ಮೋಹದ । ಕಂದನೆನಗೆ ದಿಟವು ॥ ಇಂದು ಮುನಿವುದುಂಟೆ ಗೆಲು ಹೋಗು ಭಾಷೆಯು । ಸಂದುದೆನುತ ಬಿಟ್ಟನು ॥ ೫ ॥

ಭಾಮಿನಿ

ಸವ್ಯಸಾಚಿಯು ಗುರುಬಲವನಪ । ಸವ್ಯದಲಿ ವಂಚಿಸುತ ನಡೆತರ । ಲವ್ವಳಿಸ್ತುತಿರಥರು ತಡೆದರು ಮಕರವ್ಯೂಹದಲಿ ॥ ಅವ್ಯಯನ ಬಲವಿರಲು ಬಲ್ಲನೆ । ದಿವ್ಯಶರಗೊಂಡಹಿತ ಬಲವನು । ಹವ್ಯವಾಹನನಂತೆ ಸವರಿದನೇನ ಬಣ್ಣಿಸೆನು ॥ ೧ ॥

ರಾಗ ಕಾಂಭೋಜ ಝಂಪೆತಾಳ

ತೇರು ಟೆಕ್ಕೆಯ ರಥದ ಸಾರಥಿಯ ಸವರಿ ರಣ । ಶೂರರ ಧನುಬಾಣಗಳನು ॥ ಓರಂತೆ ಕಡಿದು ಕೆಡಹಿದ ವೈರಿಮೋಹರವ । ಸೂರೆಗೊಂಡನು ಧನಂಜಯನು ॥ ೧ ॥ ಇದೆ ನರನ ಸಿಂಹಗರ್ಜನೆ ಬಿಲ್ಲ ಠೇಂಕಾರ । ಐದೆ ಪಾರ್ಥ ಬಂದನೆಂದೆನುತ ॥ ಕದನಕಲಿಗಳು ಕೈದುಗಳನು ಬಿಸುಟೋಡಿದರು । ರುಧಿರಮಯವಾಯ್ತು ಸಂಗರವು ॥ ೨ ॥

ಕಂದ

ಈ ತೆರದಿಂ ಕುರುಬಲಮಂ । ಘಾತಿಸುತರ್ಜುನ ವಿಲಯಪಿನಾಕಿಯ ಪರಿಯೊಳ್ ॥ ಕಾತರಿಸುತ್ತಿರೆ ರಣನಿ । ಭೀತ ಶ್ರುತಾಯುಧನೆಂಬವ ನರಗಿದಿರಾದಂ ॥ ೧ ॥

ರಾಗ ದೇಶಿ ಮಟ್ಟೆತಾಳ

ಎಲೆಲೆ ಫಲುಗುಣ । ಕೇಳು ನಿನ್ನಯ । ಬಲುಹು ಸಾಕಿದೇ । ಕೆನ್ನ ಕೂಡೆಲೊ ॥ ೧ ॥ ಕುರುಕುಲಾಬ್ಧಿಯ । ಕಲಕಿದೇನೆಂಬ । ಗರುವವೆನ್ನೊಳು । ತೋರಬೇಡೆಲೊ ॥ ೨ ॥ ಎನುತ ಸರಳಿನ । ಮಳೆಯ ಸುರಿವುತ ।

ಘನದಿ ಬರುತಿರೆ । ಕಂಡು ಪಾರ್ಥನು ॥ ೩ ॥ ಪೊಡೆದ ಕಣೆಗಳ । ತರಿದು ನಿಮಿಷದಿ । ಕಡಿದನಾತನ । ಕರದ ಚಾಪವ ॥ ೪ ॥ ಕಂಡು ರೋಷದಿ । ಕನಲಿ ಗದೆಯನು । ಕೊಂಡು ಪಾರ್ಥನ । ರಥವ ತುಡುಕಿದ ॥ ೫ ॥

ವಾರ್ಧಿಕ

ವರ ಶ್ರುತಾಯುಧನು ಗದೆಯಂ ಕೊಂಡು ಮುಂಬರಿದು । ಬರುತಿರೆ ಮುರಾಂತಕ ವರೂಥಮಂ ವಹಿಲದಿಂ । ತಿರುಗಿಸಲ್ ಕಿನಿಸಿನಿಂದೆರಗಿದಂ ಹರಿಯ ತಲೆಯೊಳ್ ಗದಾದಂಡದಿಂದ ॥ ಧುರದೊಳ್ ನಿರಾಯುಧಂಗಪ್ಪಳಿಸಿ ದಾಯುಧಂ । ಮರಳಿ ಬಂದಡಹಾಯುಲೆಂದ್ವರುಣಶಾಪವಿರೆ । ಮರೆದು ತಿವಿಯಲ್ಕದಂ ಬಂದು ನೆತ್ತಿಯೊಳೆರಗೆ ಮಡಿದನಾಕ್ಷಣದೊಳವನು ॥ ೧ ॥

ಭಾಮಿನಿ

ಬಳಿಕ ಫಲುಗುಣ ಕುರುಕುಲಾಂಬುಧಿ । ಕಲಕಿ ನಿಮಿಷದಿ ಕೊಂದನಗಣಿತ । ದಳವ ಕೋಪದಿ ರಕ್ತಪೆಣಗಳೊಳುರುಳಿದಾ ರಣವು ॥ ಬಳಲಿದವು ತುರಗಂಗಳೆನುತಲೆ । ಕಳನ ಮಧ್ಯದೊಳಾಗ ನೀರಿನ । ಕೊಳನ ಮಾಡಿದು ತೃಷೆ ನಿವಾರಿಸಿ ಸಮರಕನುವಾದ ॥ ೧ ॥

ಕಂದ

ಈ ಪರಿಯಿಂದಂ ರಣದಿ ಪ್ರ । ತಾಪವ ಮೆರೆಸುತ್ತಜುರ್ನನಿರೆ ಕಾಣುತ್ತಂ ॥ ಕೋಪದಿ ಗರ್ಜಿಸುತಾ ಕುರು । ಭೂಪಂ ದ್ರೋಣನ ಬಳಿಗೈತಂದಿಂತೆಂದಂ ॥ ೧ ॥

ರಾಗ ಮಾರವಿ ಏಕತಾಳ

ಆಚಾರ್ಯರೆ ನೀವ್ ಕೇಳ್ವರೆ ರಣದ ಸ । ಮಾಚಾರವನಿಂದು ॥ ನೀಚಾಧಮರೀ ಪಟುಭಟರೆಲ್ಲರು । ವಾಚಾಳಿಗಳಲ್ಲೈ ॥ ೧ ॥ ಭೂರಿ ಬಲಾನ್ವಿತರೆಂದೆನಿಸಿದು ಸಂ । ಭಾರದ ಬಿರುದುಗಳ ॥ ತೋರಿಸುತಯ್ದ್ಲ ರಣಾಗ್ರದಿ ಕಡೆಗಾ । ವೋರಿಗೆ ಮುಸುಕ್ಹಾಕಿ ॥ ೨ ॥ ಒಡಲಾಪೇಕ್ಷೆಯೊಳೋಡುತ ಬರುವರ । ಗಡಣವ ನೋಡಿದಿರ ॥ ಸುಡು ಬಾಳುವೆಯನು ಪಾರ್ಥನ ಸಮರದಿ । ತುಡುಕಲಿಕಂಜುವರ ॥ ೩ ॥ ಪುಲಿಯೋ ಸಿಂಹನೊ ನರನೆಂಬವನೀ । ಕಲಿಗಳು ಬೆದರಲಿಕೆ ॥ ಕಲಹದೊಳೆಮ್ಮಂತಲ್ಲದೇನಾದರು । ತಲೆಯೊಳು ಕಣ್ಣಿಹುದೆ ॥ ೪ ॥

ಕಂದ

ಎನೆ ಕೇಳ್ದಾ ಕಲಿ ದ್ರೋಣಂ । ಮನದೊಳಗಾತನ ವಿಕ್ರಮಕಚ್ಚರಿ ಬಡುತಂ ॥ ವಿನಯದಿ ಪಕ್ತಿರೆ ಕರೆದಾ । ಜನಪತಿಯೊಡನಿಂತೆಂದನು ಮತ್ತನು ನಯದೊಳ್ ॥ ೧ ॥

ರಾಗ ಕೇದಾರಗೌಳ ಝಂಪೆತಾಳ

ಮಗನೆ ಕುರುರಾಯ ಕೇಳು । ಚಿತ್ತದಲಿ । ಹಗರಣಿಸಬೇಡ ತಾಳು ॥ ವಿಗಡನೈ ಮೊದಲೆ ಪಾರ್ಥ । ಮತ್ತವನ । ಬಗಲೊಳಿಹನತಿ ಸಮರ್ಥ ॥ ೧ ॥ ಸಂಜೀವನವು ಕೈಯೊಳು । ಇರೆ ಮರಣ । ಕಂಜುವರೆ ಮನುಜರುಗಳು ॥ ಕಂಜನಾಭನ ಧೈರ್ಯದಿ । ಕಾದುವ ಧ । ನಂಜಯನು ಬಲು ಶೌರ್ಯದಿ ॥ ॥ ೨ ॥ ಮುಂದಾಹ ಭಟನಾವನು । ಬರಿದೆ ನೀ । ನಿಂದಿಸದಿರತಿ ನೋವನು ॥ ಕಿಂದು ಮರಳಿಹರಲ್ಲದೆ । ಇದಕವರಿ । ಗಿಂದು ಬಿರುದುಗಳ್ ಸಲ್ಲದೆ ॥ ೩ ॥

ವಾರ್ಧಿಕ

ಗರುಡಿಯಾಚಾರ್ಯನಿಂತೆನೆ ಕೇಳ್ದು ಕನಲುತ್ತ । ಲರಿಗಳಂ ಪೊಗಳ್ವುದಾದರೆ ನಿಮ್ಮ ನಾಲಿಗೆಯು । ಗರಿಯುತಿದೆ ಮೊಳನುದ್ದ ಬಿಡಿ ಸಾಕದಂತಿರಲಿ ನೋಳ್ಪುದೀಗಾ ಪಾರ್ಥನ ॥ ಧುರದಿ ಹಿಮ್ಮೆಟ್ಟಿಸುವೆನೆಂದು ಹೆಕ್ಕಳಿಸುತಿರೆ । ಕುರುರಾಯನಂ ಪೊಗಳುತಾ ಕಿರೀಟಿಯ ಕೂಡೆ । ಧುರ ಮಹೇಶನಿಗರಿದು ನೀನಿನ್ನು ಜಯಿಸಿದರೆ ನಮ್ಮ ಪುಣ್ಯವಿದೆಂದನು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಆದಡೆಲೆ ಕುರುರಾಯ ಕೇಳುವಿ । ನೋದದಿಂದಾ ರಣದಿ ನರನೊಳು । ಕಾದುವರೆ ನಿನಗೀವೆ ಕವಚವ । ಮೋದದಿಂದ ॥ ೧ ॥ ಪಿಂತೆ ವೃತ್ರಾಸುರನ ಸಮರದಿ । ಕಂತುಹರ ಸುರಪತಿಗೆ ಕೊಡಲಾನಂತರದೊಳವನಿಂದ ಗುರುವಿಗೆ । ಬಂತು ಬಳಿಕ ॥ ೨ ॥ ಹರುಷದಿಂದಿತ್ತನು ಬೃಹಸ್ಪತಿ । ವರ ಭರದ್ವಾಜಂಗೆ ಮೇಣದ । ಕರೆದು ಕೊಟ್ಟನು ಮುನಿಪನೆನಗೀ । ಮೆರೆವ ಕವಚ ॥ ೩ ॥ ಸಮರಕಿದನಳವಡಿಸಿ ಪೋದರೆ । ಕಮಲಭವನಿಂಗರಿದು ಜಯಿಸಲು । ಭ್ರಮಿತ ಮನುಜರ ಪಾಡೆ ನೀ ನೋ । ಡಮಿತಶೌರ್ಯ ॥ ೪ ॥

ಭಾಮಿನಿ

ಎನುತ ಪೇಳ್ದಾ ಕವಚವನು ತಾ । ಜನಪನಂಗದಿ ತೊಡಿಸಿ ದ್ರೋಣನು । ವಿನಯದಿಂ ಕಳುಹಲ್ಕೆ ಸಂತಸದಿಂದಲಾಕ್ಷಣದಿ ॥ ಘನಸುಪನ್ನಗದಿಂದ ಪಳ

ವಿಗೆ । ಯನು ವಿರಾಜಿಪ ರಥವನಡರಿದು । ವಿನುತ ವಾದ್ಯಾರವದಿ ಸನ್ನಹ
ವಾಗಿ ನಡೆತಂದ ॥ ೧ ॥

ಕಂದ

ಗುರುವಿನೊಳಗ್ಗದ ಕವಚಂ । ಕುರುಪತಿ ಪಡೆದಾರ್ಭಟಿಸುತ ಪಾರ್ಥನ
ಮುದದಿಂ ॥ ಬೆರೆದಿದಿರಾಗಲ್ ಕಾಣುತ । ನರನತಿ ರೋಷದಿ ಕನಲುತಲವ
ನೊಡನೆಂದಂ ॥ ೧ ॥

ರಾಗ ಭೈರವಿ ಅಷ್ಟತಾಳ

ಕುರುರಾಯ ಕೇಳಿದನು । ದ್ಯೂತದಿ ಪಿಂತೆ । ಅರಿಭವಗೊಟ್ಟುದನು ॥
ಭರದಿ ನೀನುಳಿದೀಗ ಶರದ್ಯೂತಕೇಳಿಗೆ । ಹರುಷದಿಂದನುವಪ್ಪುದು ॥ ೧ ॥
ಗಳಹದಿರೆಲವೊ ಪಾರ್ಥ । ನೆತ್ತಿಯ ಪಿತ್ತ । ವಿಳಿಯಲಿಲ್ಲೇನೊ ವ್ಯರ್ಥ ॥
ಕೊಳುಗುಳದೊಳು ಯುದ್ಧಕಂಗೈಸದಿನಿತೇಕೆ । ಬಳಲುವೆಯೆನುತೆಚ್ಚನು ॥ ೨ ॥
ನಿನಗಿರಿವುದಕೆ ತನ್ನ । ಬಾಣಾಳಿಯು । ತನಗೆನಗೆಂಬುದಿನ್ನ ॥ ಅನಿಲಜ
ಗೆಯ್ದ ಭಾಷೆಯ ನಿಮಿತ್ತದಿ ಬಿಟ್ಟೆ । ನೆನುತ ಕೈಮುರಿದೆಚ್ಚನು ॥ ೩ ॥

ಭಾಮಿನಿ

ಖಳ ಸುಯೋಧನ ಕರವ ಝಾಡಿಸು । ತಳವಿಯಲಿ ಮೊಗದಿರುಹಲಾ
ಕ್ಷಣ । ಕಿಲಕಿಲಾರವದಿಂದ ಕೊಂದನು ಪಾರ್ಥ ಪರಬಲವ ॥ ಕೆಳನೊ
ಳಿತ್ತಲು ಜವನ ತನುಜನು ನಳಿನನಾಭಾರ್ಜುನರ ಹದನವ । ತಿಳಿದು ಬಾಳಿನೆ
ನವಿುಸಿ ಸಾತ್ಯಕಿ ಭರದೊಳಯ್ತಂದ ॥ ೧ ॥

ರಾಗ ಮಧ್ಯಮಾವತಿ ಅಷ್ಟತಾಳ

ಬಂದನು ಸಾತ್ಯಕಿ ಭರದೊಳಾರ್ಭಟಿಸಿ । ಪೊಂದೇರನಡರುತ ತಾ
ಳಟಕಟಿಸಿ ॥ ಇಂದುಧರೇಶನಂತಿಹ ಕಲಿ ದ್ರೋಣನ । ಮುಂದೆ ಶರಾವಳಿ
ತುಡುಕುತ ರಭಸದಿ ॥ ೧ ॥ ಕಂಡನು ದ್ರೋಣನಾ ಸಾತ್ಯಕಿಯಿರುವ ।
ತುಂಡಿಸಗಿದನು ಮುಂದಯ್ತಪ್ಪ ಶರವ ॥ ಚಂಡ ಸಾಹಸಿ ಪಾರ್ಥನಂತೆ ನೀ
ನೆನಗೀಗ । ಮಂಡೆ ಬಾಗಿಸಿ ಪೋಪುದುಚಿತವೆಂದೊರೆದನು ॥ ೨ ॥
ಮೊದಲು ಮದ್ಗುರುವೆಸಗಿದ ಪರಿಯಿಂದ । ಪದುಳಿಸಿ ಪೋಪೆನೆಂದೆನಲವ
ನೆಂದ ॥ ಕದನಚಾಪಟ ತನ್ನ ಪದದೊಳಗೆರಗಿಸಿ । ಚದುರ ಪೋಗೆನಲಾಗ
ಲಯ್ತಂದ ಸಹಸದಿ ॥ ೩ ॥

ವಾರ್ಧಿಕ

ಅಂಧನೃಪ ಲಾಲಿಸೀತೆರದಿ ಸಾತ್ಯಕಿ ಪ್ರೊಕ್ಕ । ನಂದು ಪದ್ಮವ್ಯೂಹವಮಂ ಬಳಿಕ ರಿಪುಬಲದಿ । ಕೊಂದನಗಣಿತ ಹಸ್ತಿ ಹಯ ರಥ ಪದಾತಿಗಳ ಭೂಪಾಲನಿಚಯ ಸಹಿತ ॥ ಒಂದು ಕಡೆಯೊಳಗತ್ತ ಪಾರ್ಥ ಸಂಹರಿಸಿದಂ। ಮುಂಬರಿವ ಚದುರಂಗಸೇನಾಸಮೂಹವಮಂ । ಸಂದುದೀ ತೆರದಿ ಕುರು ಬಲವಂತಕನ ನಗರಿಗೇನೆಂಬೆನದ್ಭುತವನು ॥ ೧ ॥

ಭಾಮಿನಿ

ಅನುವರದಿ ಕಲಿಪಾರ್ಥ ದಾರುಕ । ನನುಜ ಸಹಿತಗಣಿತ ಬಲೌಘವ । ಮುನಿದು ಕಾಲನ ನಗರಿಗಯ್ದಿಸಲಾ ತತುಕ್ಷಣದಿ ॥ ವನಜನಾಭನ ಪಾಂಚಜನ್ಯ । ಧ್ವನಿ ಕಪೀಂದ್ರನ ಬೊಬ್ಬೆ ಬೆದರಿಸಿ । ತನಿಮಿಷರ ಬಳಿಕಾ ಯುಧಿಷ್ಠಿರ ಭೀಮಗಿಂತೆಂದ ॥ ೧ ॥

ರಾಗ ಘಂಟಾರವ ರೂಪಕತಾಳ

ತಮ್ಮ ಬಾರಯ್ಯ । ತವಕದಿಂದಲಿ । ಒಮ್ಮೆ ಕೇಳಿದು । ಒದಗಿ ಮಾಳ್ಪುದು ॥ ಹಮ್ಮಿಯಿಂದಲಿ । ಹಗೆಯ ಕೊಲ್ಲುವೆನೆಂ । ದೆಮ್ಮ ಭಾಷೆಯ । ತೋರಿ ಫಲುಗುಣ ॥ ೧ ॥ ರಣಕೆ ಪೋಗಿಯೇ । ರಭಸವಡಗಿತೊ । ದಣಿದು ನಿಂದನೊ । ಧರೆಯ ಮೇಲಣ ॥ ಋಣವೆ ಸಂದುದೊ । ರಣದ ಪರಿಯಿದು। ಎಣಿಸಿ ನೋಡಲು । ಎದೆಯು ಬಿರಿವುದು ॥ ೨ ॥ ಹರಿಕಪೀಂದ್ರರ । ಹುಯ್ಯಲಂಗಳ । ಬಿರಿಸು ಪಾರ್ಥನೆ । ಬಗೆದನೆಂಬುದ ॥ ಅರಿಯದಾದೆನೆ । ನ್ನೆದೆಯೊಳ್ ಜೀವವು । ಸ್ಥಿರದಿ ನಿಲ್ಲದು ॥ ಸ್ಥಾಣು ಬಲ್ಲನು ॥ ೩ ॥

ಭಾಮಿನಿ

ಎನಲು ಕೇಳ್ದಾ ಕ್ಷಣದೊಳಣ್ಣನ । ಘನ ಪದಾಬ್ಜಕೆ ಮಣಿದು ಮಾರುತ । ತನಯ ಮುಯ್ಯೋರಿದನು ರಿಪುಬಲಕೆಂದು ಜವನಂತೆ ॥ ಅನುವರಕೆ ನೆರೆದಿರ್ದ ಸೇನಾ । ವನಧಿಯನು ಕಂಡಳವಿಯನು ಕೊಡು । ವನುಜನಲ್ಲಿಗೆ ಪೋಪ ಭರವನು ಕಂಡನಾ ದ್ರೋಣ ॥ ೧ ॥

ರಾಗ ಪಂಚಾಗತಿ ಮಟ್ಟೆತಾಳ

ಎಲೆವೊ ಭೀಮ ಗಮನವೆಲ್ಲಿ । ನಿಲು ಸಮರ್ಥನಹುದು ಪಾರ್ಥ । ನಳುಕಿದಂತೆ ಪೋಗುತಿಹೆಯೊ । ಬಲುಹ ತೋರ್ಪೆಯೊ ॥ ೧ ॥ ನಿಲುಗಡೆ

ಯನು ಸೂಚಿಸೆಂದ । ಮುಳಿದು ದ್ರೋಣಗೆಂದನವನು । ತಿಳಿಯೆ ಪಾರ್ಥ
ಹುಡುಗನ್ನೆಸೆ । ಬಳಿಕ ನಿರ್ಮ್ಮಳು ॥ ೨ ॥ ಧುರದಿ ತಾರ್‍ಹಿಯೆಂಬುದುಂಟೆ ।
ಗುರುಗಳಿದನು ನೋಡಿರೆನುತ । ಮುರಿದು ಹೊಕ್ಕನತಿರಥರ ನು । ಗ್ಗರಿದು
ನಿಮಿಷದಿ ॥ ೩ ॥ ಆತನಸ್ತ್ರಚಯಕೆ ನಿಜ ಬ । ಲಾತಿಶಯನು ದಂಡೆಯೊಡ್ಡಿ ।
ಸೂತನನ್ನು ಕೆಡಹಿ ಹಯವ । ಘಾತಿಸಿದನು ॥ ೪ ॥ ಗುರುಗಳೆಮಗೆ ನೀವು
ನಮ್ಮ । ಗರುಡಿಯೊಳಗೆ ಜಡುವಾಗ । ಮರೆತ ವಂದನೆಯನು ಕೊಂಬು ।
ದಿರದೆ ಸಮರದಿ ॥ ೫ ॥ ಶರದಿ ಕಾಡಲಿವನ ಕೂಡೆ । ಹರನಿಗರಿದೆನುತ್ತ
ಭೀಮ । ನುರಿಯನುಗುಳುತಾಗ ಗದೆಯ । ತಿರುಹುತೆಂದನು ॥ ೬ ॥ ಆತು
ಕೊಳ್ಳಿ ವಂದನೆಯನು । ಪ್ರೀತಿಯಿಂದಲೆನುತ ನಿಜವ । ರೂಥ ಚೂರ್ಣ
ಗೆಯ್ದು ಹೊಕ್ಕ । ವಾತಸಂಭವ ॥ ೭ ॥

ಕಂದ

ನುಗ್ಗುತ ಭೀಮಂ ರಿಪುಬಲ । ದಗ್ಗಳರಂ ಸದೆದೀಡಾಡಲು ಭರ
ದಿಂದಂ ॥ ಮುಗ್ಗಿದ ಬಲ ಕಾಣುತ ರಣ । ಹುಗ್ಗಿಗರಾ ಕುರುಭೂಪಾನುಜ
ರಡಹಾಯ್ದರ್ ॥ ೧ ॥

ರಾಗ ದೇಶಿ ಅಷ್ಟತಾಳ

ಬಂದು ಬೇಗದಿ ನೃಪನನುಜರು ರಣ । ಕಂದು ಭೀಮನೊಳೊದಗಿ
ಕಾದಿದ । ರೊಂದುಗೂಡುತ ಶೌರ್ಯದಿ ॥ ೧ ॥ ವೆಂಟಣಿಸುತ ಬಹು ರೋಷ
ದುಬ್ಬಿನ । ಗಂಟಿನಲಿ ಸೊಕ್ಕಿರ್ದರಾ ಪದಿ । ನೆಂಟು ಜನ ನೃಪತಿಲಕರು ॥ ೨ ॥
ಕಂಡು ಭೀಮನು ರಿಪುಜಾತರಿಂಗೆಲ್ಲ । ದಿಂಡುದರಿವೆನೆನುತ್ತ ಗದೆಯುಲಿ ।
ಖಂಡಿಸಿದನತಿ ತೀವ್ರದಿ ॥ ೩ ॥

ಭಾಮಿನಿ

ಅನುಜರಳಿಯಲು ಕಂಡು ಕೌರವ । ಜನಪನತಿ ದುಃಖಿಸುತಲೀವರೆ ।
ಗಿನಿತು ಮೂವತ್ತೆರಡು ಜನವಗಲಿದರೆ ಹಾಯೆನುತ ॥ ಘನ ಪರಾಕ್ರಮಿ
ವೀರರಗ್ಗಳ । ರನುವರಕೆ ತಾವಂಜಿ ಮಕ್ಕಳ । ನಿನಿತು ಕೊಟ್ಟರು ಪಾಪಿ
ಭೀಮನಿಗೆಂದು ಬಿಸುಸುಯ್ದ ॥ ೧ ॥

ವಾರ್ಧಿಕ

ಕುರುನೃಪಂ ಮೂದಲಿಸೆ ಕೇಳುತಾ ಕಲಶಜಂ । ಘರಘರನೆ ಪಲ್ಲಡಿವು
ತಾರ್ಭಟಿಸಿ ವಾತಜನ । ಕರುಳನುಗಿವೆನೆನುತ್ತ ಬೆನ್ನಟ್ಟುತಯ್ತಂದು

ಕಾಣುತ ವ್ಯಕೋದರನೊಡಳು ॥ ಭರದಿ ಖಾಡಾಖಾಡಿಯಿಂದಲಿಚ್ಯಾಡುತಿರೆ । ಉರುಪರಾಕ್ರಮಿ ಭೀಮನಾತನ ರಥಂ ಪಿಡಿದು । ತಿರುವಿಟ್ಟಸಭ್ರದೊಳ್ ಬುಗುರಿಯಂದದಿ ತಿರುಗಿ ಧೊಪ್ಪನವನಿಗೆ ಬೀಳಲು ॥ ೧ ॥

ಕಂದ

ಬಿದ್ದಬ್ಬರಕಾ ರಥ ಪುಡಿ । ಹೊದ್ದುದು ದ್ರೋಣಂ ಮಂಡಿಯನೂರುತ ನಗುತಂ ॥ ಎದ್ದು ಸರಾಗದಿ ತಾ ಮು । ನ್ನಿದ್ದಲ್ಲಿಗೆ ಪೋಗಲು ಪವನಜನತಿ ಮೆರೆದಂ ॥ ೧ ॥

ವಾರ್ಧಿಕ

ಕೇಳು ಧೃತರಾಷ್ಟ್ರಾವನೀಶ ಬಳಿಕದ್ಭುತದ । ಕಾಳಗವನೇವೇಳ್ವೆ ಕರ್ಣ ನತಿ ರೋಷಮಂ । ತಾಳಿ ಗರ್ಜಿಸುತಯ್ದಿ ಪವಮಾನನಂದನನ ಕೆಣಕು ತಿರ್ದ್ದಾಡಿ ಭರದಿ ॥ ತೋಳುಗಳನಬ್ಬರಿಸಿ ಪೊಯ್ದಾಡಿ ಭಂಗದಿಂ । ಧಾಳಿಗೆಟ್ಟಾ ರವಿಜ ಮರಮರಳಿ ಪದಿನೆಂಟು । ಸೂಳಿನೊಳಗಯ್ತಂದು ಜಯುವ ಕಾಣದೆ ಬಳಿಕ ಕೋಪದಿಂದಿದಿರಾದನು ॥ ೧ ॥

ರಾಗ ಪಂಚಾಗತಿ ಮಟ್ಟೆತಾಳ

ಎಲವೊ ಮರುತಸೂನು ನಿನ್ನ । ಬಲುಹ ಬಲ್ಲೆ ನಿಲ್ಲು ನಿಲ್ಲು । ಕಲಹ ದಲ್ಲಿ ಗೆಲ್ದೆನೆಂದು । ನಲಿಯಬೇಡವೊ ॥ ಮಲೆತು ನೀನು ನಿಲ್ಲಲೀಗ । ಲೊಲಿದು ಭೂತಗಣಕೆ ಹರಹಿ । ಬಲಿಯ ಕೊಟ್ಟು ಕೌರವನಿಗೆ । ಗೆಲವ ತೋರ್ಪೆನು ॥ ೧ ॥ ಎನಲು ಕೇಳ್ದು ಪವನಜಾತ । ಕನಲಿ ನುಡಿದನೆಲವೊ ನಿನ್ನ । ಘನ ಪರಾಕ್ರಮಕ್ಕೆ ಸರಿ ಕಾ । ಣೆನು ಭಟಾಂಗದಿ ॥ ಜನಪನಿಂಗೆ ಜಯುವ ತೋರ್ಪ । ಬಿನುಗು ನೀನು ನಿಲ್ಲೆನುತ್ತ । ವಿನುತ ದಿವ್ಯಶರಗಳಿಂದ ಲಿನಜಗೌಕಿದ ॥ ೨ ॥ ಪೊಡೆದ ಬಾಣತತಿಯನೆಲ್ಲ । ಕಡಿದು ಭೃಗುಜದತ್ತ ಶರವ । ನಿಡಲು ಮರುತಜಾತ ರಣದಿ । ಮಡಿದ ಪೆಣಗಳ ॥ ಪಿಡಿದು ರಥದ ಗಾಲಿಯಿಂದ । ಹೊಡೆಯಲದನು ತರಿದು ಮುಂದ । ಕಡಚಿ ಬಂದು ವಾಯುತನುಜ । ನೊಡಲಿಗೆರಗಿತು ॥ ೩ ॥

ಭಾಮಿನಿ

ರವಿಜನುರವಣೆಗಾ ಮರುತ್ಸುತ । ಬವಣೆಗಾಶ್ರಿತನಾಗಿ ಮಲಗಿರ । ಲವಘಡಿಸಿ ಕಲಿಕರ್ಣ ಬೆರೆದತಿ ಬಿಲ್ಲಕೊಬ್ಬಿನಲಿ ॥ ತಿವಿದು ಕುರುಕುಲ

ವರಿವ ಭಾಷೆಯ । ಸವಿಯ ಕಂಡೈಯೆನುತ ಜಡಿಯಲು । ಪವನಸುತನೊಳೆ
ವರಿತು ಪಾರ್ಥನೊಳೆಂದನಸುರಾರಿ ॥ ೧ ॥

ಶಾರ್ದೂಲ

ಮರುಳೆ ಫಲುಗುಣ ರಣದ ಗಾವಲಿಗತನದಿ ಪುಂ । ಬರಿದು ತನ್ನ
ವರುಗಳನೀಕ್ಷಿಸದೆ ವ್ಯೆಮರೆವ । ಧುರಪರಾಕ್ರಮವೆ ಭೀಮನ ಭಂಗಮಂ
ನೋಡು ಪಿಡಿ ಧನುವನುಗಿ ಕಣೆಗಳ ॥ ಸೆರೆಯ ಬಿಡಿಸೆನುವ ನುಡಿ ಹಿಂಚಿತಾ
ರಥ ಮುಂದ । ಕುರವಣಿಸಿ ಪಾರ್ಥ ರಿಪುವಂ ಜಡಿವುತಗ್ರಜನ । ಪರಿಭವವ
ನಪಹರಿಸೆ ನಾಚಿ ನೂರುತಿ ಸಾತ್ಯಕಿಯ ರಥದ ಬಳಿ ಸಾರ್ದನು ॥ ೧ ॥

ಕಂದ

ಬಳಿಕ ಮಹಾರಥರೊಗ್ಗಿನೊ । ಳಳವಿಗೊಡುತ್ತ ಧನಂಜಯನಿರಲಾ
ಕ್ಷಣಕಂ ॥ ಮುಳಿದಿತ್ತಲು ಕಲಿ ಸಾತ್ಯಕಿ । ದಳದುಳಿಸುತ್ತಲಿ ಸೇನೆಯನುಂ
ಬರಿಗೆಯ್ದಂ ॥ ೧ ॥

ಆರ್ಯಾ

ಈ ತೆರದಿಂ ಬಲವೆಲ್ಲವ ಸಮರದಿ । ಘಾತಿಸುತಿರೆ ಸಾತ್ಯಕಿಯಂದು ॥
ಖ್ಯಾತನು ಭೂರಿಶ್ರವನಿದಿರಾಗಲಿ । ಕಾತಗೆ ಪೇಳ್ದನು ಖತಿದಂದು ॥ ೧ ॥

ರಾಗ ಭೈರವಿ ಏಕತಾಳ

ಎಲೆಲೆ ಭೂರಿಶ್ರವನೆ । ರಣ । ಗಲಿಯಾಗೀಗೆನ್ನೊಡನೆ ॥ ನಿಲು ನಿಲು
ಬಳಿಕ ಬೆದರದೆ । ಕೂ । ರಲಗಿಗೆ ನೀ ಗುರಿಯಾದೆ ॥ ೧ ॥ ಫಡ ಫಡ ಸಾತ್ಯಕಿ
ನಿನ್ನ । ತಲೆ । ಗಡಿಯದೆ ಬಿಡೆ ನೋಡೆನ್ನ ॥ ಕಡುಹ ನೋಡೆನುತಡಹಾಯ್ದು ।
ಮುಂ । ದಡಿಯಿಡದಂತಿರೆ ತಡೆದು ॥ ೨ ॥ ಭಳಿರೆ ಶಭಾಸುರೆ ಭಟನು ।
ಧುರ । ದೊಳಗಹೆ ನೀ ದುರ್ಘಟನು ॥ ಹಳಚುವ ಬಗೆಯೊಳಿಂತೆಂದು ।
ದಳ । ದುಳಿಸಿದ ಸಾತ್ಯಕಿಯಂದು ॥ ೩ ॥ ಮರ್ಝು ಭಾಪೆನುತಲೆ ಭೂರಿ ।
ಶ್ರವ । ಗಜರುತ್ತಲೆ ಕೈಮಾರಿ ॥ ವಿಜಯನ ಶಿಷ್ಯನ ಪಿಡಿದು । ಮಿಗೆ । ನಿಜ
ಹಸ್ತದೊಳಸಿ ಜಡಿದು ॥ ೪ ॥

ಭಾಮಿನಿ

ಬವರದಲಿ ಖಡ್ಗವನು ಭೂರಿ । ಶ್ರವ ಗಜರಿ ಸಾತ್ಯಕಿಯ ಕೊರಳಿಗೆ ।
ತವಕದಿಂ ತುಡುಕುತಿರೆ ದೂರದಿ ಕಂಡು ಕಲಿ ಪಾರ್ಥ ॥ ಹವಣದಪ್ಪಿದುದೆನು
ತಲಾ ಗಾಂ । ಡಿವಕೆ ಶರವನು ಪೂಡಿ ರೋಷದೊ । ಳವನ ಖಡ್ಗದ ಕರವ
ಕತ್ತರಿಸಿದನು ನಿಮಿಷದಲಿ ॥ ೧ ॥

ವಾರ್ಧಿಕ

ಕರಗಳುಡಿಯಲ್ಕೆ ಭೂರಿಶ್ರವಂ ಬೊಬ್ಬಿರಿವ್ರ । ತುರಿಸುಸಗಿ ಪಾರ್ಥನಂ ಬಯ್ಯು ಶರಸಂನ್ಯಾಸ । ವೆರಸಿದ ಸಮಾಧಿಯಂ ಬಲಿದಿರಲ್ ಕಂಡು ಮುಂಬರಿದು ಸಾತ್ಯಕಿ ಕನಲುತ ॥ ಭರದಿಂದಲಯ್ದಿ ಯೋಗಾರೂಢನಾದವನ । ಕೊರಳಿಗೆ ಕಠಾರಿಯಂ ಚಾಚಿ ಕತ್ತರಿಸಲ್ಕೆ । ದುರುಳನಿವ ಯೋಗಿಯಂ ಕೊಂದ ಹಾ ಹಾಯೆನುತ ದೂರಿದರ್ ಸರ್ವಜನರು ॥ ೧ ॥

ಭಾಮಿನಿ

ಪೊಡವಿಪತಿ ಜನಮೇಜಯನೆ ಕೇ । ಳೊಡೆಯ ಕೃಷ್ಣನು ತನ್ನ ಭಕ್ತನು । ನುಡಿದ ಭಾಷೆಯ ಸಲಿಸಬೇಕೆಂದಾ ಸುದರ್ಶನವ ॥ ಹಿಡಿಯೆ ರವಿ ಮಂಡಲಕೆ ದಿನಮಣಿ । ನಡೆದನೆಂದಾ ಪಾರ್ಥ ರಥವನು । ತಡೆಯದಿಳಿದಚ್ಯುತಗೆ ಬಿನ್ನಹ ಮಾಡಿದನು ಬಳಿಕ ॥ ೧ ॥

ರಾಗ ಆನಂದಭೈರವಿ ಏಕತಾಳ

ವಾರಿಜನೇತ್ರ ಕೇಳಯ್ಯ । ವೈರಿ ಸೈಂಧವನ ಕಾಯ । ತೋರದು । ಯುದ್ಧ । ತೀರದು ॥ ೧ ॥ ರವಿಯಸ್ತಮಾನವಾದನು । ತವಕದಿಂದಗ್ನಿಕುಂಡವನು । ಮಾಡುವೆ । ತನುವೀ । ಡಾಡುವೆ ॥ ೨ ॥ ಇಂತೆಂಬ ಪಾರ್ಥನ ನುಡಿಯ । ಕಂತುಪಿತ ಕಾಣುತೆಳೆನಗೆಯ । ಸೂಸಿದ । ಮಾಯ । ಬೀಸಿದ ॥೩॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ರಾಯ ಕೇಳ್ಕೆ ರಣದಿ ನರ ನಾ । ರಾಯಣರು ಮಾತಾಡುತಿರೆ ಕುರು । ರಾಯ ಹಿಗ್ಗಿದನುಳಿದ ಸೈಂಧವ । ರಾಯನೆಂದು ॥ ೧ ॥ ಒದರಿದವು ಬಹು ವಾದ್ಯಗಳು ನೆಲ । ನದುರಲಾ ರಿಪುಸೇನೆ ಪಾರ್ಥನ । ತುದಿಯ ಕಾಲವ ಕಾಂಬೆನೆಂದೆನು । ತೊದಗಿ ನಿಲಲು ॥ ೨ ॥ ನಿಲುಕಿ ನೋಡಿದನೆಲ್ಲಿ ತೋರಾ । ಫಲುಗುಣನು ತನಗೆನುತ ಸೈಂಧವ । ನುಲಿಯೆ ಹರಿ ಕಂಡಾಗ ಪಾರ್ಥಗೆ । ತಿಳಿಯುತೆಂದ ॥ ೩ ॥ ತಡವ ಮಾಡದಿರೆಲವೊ ಫಲುಗುಣ । ತೊಡು ಮಹಾ ಶರವನ್ನು ವೈರಿಯ । ಕೆಡಹು ಬೇಗದೊಳೆನಲು ಹರಿಯೊಳು । ನುಡಿದ ನರನು ॥೪॥ ದೇವ ರವಿಯಸ್ತಮಿಸಿದನು ನೀ । ನಾವುದುಚಿತವ ಕಂಡೆಯೆನೆ ನಿನ । ಗಾವ ಭಯ ಬೇಡೆಂದನಾ ರಾ । ಜೀವನಯನ ॥ ೫ ॥ ಗಾಢದಲಿ ಸೈಂಧವನ ಕೊಲು ಮಾ । ತಾಡಿ ಫಲವಿಲ್ಲೆನಲು ಚಾಪಕೆ । ಪೂಡಿದನು ಪಾಶುಪತಶರವನು । ಗಾಢದಿಂದ ॥ ೬ ॥

ವಾರ್ಧಿಕ

ತೆಗೆಯೆ ಜಗ ಕಂಪಿಸಿತು ಶೀಘ್ರದಿಂ ತಾರೆಗಳ । ನೊಗಳಿಸಿತು ನಭ
ಮಹಾ ಜಲಧಿ ಮೊದಲಾದ ಧರೆ । ಯುಗಣಿತ ಕುಲಾಚಲಗಳೊಲಿದವೆಡ
ಬಲದಿ ನಿಮಿಷಾರ್ಧದೊಳಗೇನೆಂಬೆನು ॥ ದಿಗಧಿಪರು ನಡನಡುಗೆ ವಾಸುಕಿ
ಫಣಾಳಿ ಧಗ । ಧಗನೆ ದಳ್ಳುರಿ ಕಾರಿತೇನೆಂಬೆನದ್ಭುತವ । ವಿಗಡ ಪಾರ್ಥಗೆ
ಬೆಸಸು ಬೆಸಸೆನ್ನುತಿರ್ದುದಾ ಪಾಶುಪತಬಾಣವರರೆ ॥ ೧ ॥

ರಾಗ ಮಾರವಿ ಏಕತಾಳ

ನರನತಿ ವೇಗದಿ ಪಾಶುಪತವ ಕಿವಿ । ವರೆಗುಗಿದರಿಭಟನ ॥ ಶಿರವ
ನೆಚ್ಚಡೆ ಕೊಂಡೊಯ್ದುದು ಗಗನಾಂ । ತರಕೆ ಕ್ಷಣಾರ್ಧದೊಳು ॥ ೧ ॥
ಹಾರುವ ರಕ್ತದ ಧಾರೆಯೊಳ್ ತೊಯ್ದುದು । ಕೌರವಬಲವಂದು ॥ ಗಾರು
ಗೊಂಡುದು ಘನ ಶೌರ್ಯದಿ ಶಕ್ರಕು । ಮಾರನು ಕಂಡೆಂದ ॥ ೨ ॥ ಬೀಳು
ಬೀಳಭಿಮನ್ಯುವಿನೊಧೆ ನಿನ್ನನು । ಬಾಳಲೀವುದೆಯೆನಲು ॥ ಕೇಳುತ ಹರಿ
ತೊಡು ತೊಡು ಬೇಗದಿ ಪ್ರತಿ । ಕೋಲನು ಶಿರದೆಡೆಗೆ ॥ ೩ ॥ ನೆರೆ ತಂದೆಯ
ಶಾಪವು ಸುತನಾಸ್ಯವ । ಧರೆಗಿಳುಹಿದ ಭಟನ ॥ ಶಿರ ಸಾಸಿರ ಹೋಳಾಗಲಿ
ನುತ ತಪ । ಸಿರುವ ದುರಾತುಮನು ॥ ೪ ॥ ವೃದ್ಧಕ್ಷತ್ರಿಯನಾತನ ಕೈಯೊಳು ।
ಹೊದ್ದುವಂತೆಸಗೆನಲು ॥ ರುದ್ರನ ಘೋರ ಶರಕೆ ಬೆಸಸಿದನವ । ನಿದ್ದೆಡೆ
ಗಮಿಸೆನುತ ॥ ೫ ॥ ತುಡುಕಿ ಕೊರಳ ಕೊಂಡೊಯ್ದುದು ನಭದಲಿ । ಗಿಡು
ಗನು ಹಾಯ್ವಂತೆ ॥ ಬಿಡುತಿರಲರ್ಘ್ಯವನಾಗಲೆ ಕೈಯಲಿ । ಕೆಡಹಿತು ಶಿರ
ವನ್ನು ॥ ೬ ॥ ಅರ್ಘ್ಯಜಲವು ಕೆಂಪಾದುದ ನೋಡಿ ವೈ । ರಾಗ್ಯದಿ ಧರೆಗಿಡಲು ॥
ಶೀಘ್ರದಿ ಶಿರ ಸಾಸಿರ ಹೋಳಾಯಿತು । ಉಗ್ರಶಾಪದೊಳವಗೆ ॥ ೭ ॥

ವಾರ್ಧಿಕ

ಸಂಗರಂ ಮೆರೆವುದಾವುದರಿಂದವನಿಯೊಳ್ ಕು । ಲಾಂಗನೆಯುರಿಂಗ
ಧಿಕ ಭಾಗ್ಯಮೇನೆಂದರಿದು । ಕಂಗೊಳಿಸಲೆರಡು ಪೆಸರಂ ಬರೆದು ಮೊದಲು
ಪಙ್ಕ್ತಿಯ ಮುನ್ನಿನಕ್ಷರವನು ॥ ಸಂಗಡಿಸಲೆರಡನೆಯ ಪಙ್ಕ್ತಿಯುಭಿ
ಧಾನದಿಂ । ಕಂಗೊಳಿಸುತಿರ್ಪ ನೃಪನಂ ಮುರಿದನೆಂದಮರ । ಪುಂಗವಕದಂಬ
ದೊಳಗಚ್ಯುತನ ಮೈದುನನ ಶೌರ್ಯಮಂ ಪೊಗಳುತಿರಲು ॥ ೧ ॥

ರಾಗ ಸಾಂಗತ್ಯ ರೂಪಕತಾಳ

ರಾಯ ಕೇಳಿನ್ನೇನನೆಂಬೆನು ಶ್ರೀಕೃಷ್ಣ । ರಾಯನ ಮಂತ್ರಶಕ್ತಿಯನು ॥

ರಾಯ ಕೌರವನಹಂಕಾರವು ಜರಿದುದು । ಪಾಯುವನರಿವರಾರಿಂದ ॥ ೧ ॥ ತರಣಿಗೆ ಮರೆಯ ಮಾಡಿದ ಚಕ್ರವನು ಬೇಗ । ತರೆದಾಗ ಭಾನುಮಂಡಲವ ॥ ನರಸಿಗೆ ತೋರಲಾಗರಿಸೇನೆ ಸೂರ್ಯನ । ಜರಿಯುಲೂಡಿಯುವು ಬಂದಪುದೆ ॥ ೨ ॥ ದೈವಬಲವೆ ಮಹಾಬಲವಯ್ಯ ಶಿವ ಶಿವ । ದೈವಪೌರುಷ ಕೆಣೆಯುಂಟೆ ॥ ದೈವಹೀನರ ಕೈಗೆ ಪರಶು ಪಾಷಾಣವು । ದೈವಾಧೀನದ ಜಗವಿಹುದು ॥ ೩ ॥ ಎಂದು ದ್ರೋಣಾದಿನಾಯಕರು ಮಾತಾಡುತ್ತ । ಲಂದು ಪಾಳಯಸಹ ತೆರಳೆ ॥ ಬ[illegible] ಫಲುಗುಣನಚ್ಯುತನೊಡನೆ ಸಾ । ನಂದದಿ ಧರ್ಮಜನೆಡೆಗೆ ॥ ೪ ॥

ಭಾಮಿನಿ

ಜನಪ ಜನಮೇಜಯನೆ ಕೇಳ್ಳೈ । ಚಿನುಮಯಾರ್ಜುನರಯ್ತರಲು ಕಂ । ಡಿನಜಸುತನಿದಿರಾಗಿ ಸತ್ಕಾರದಲಿ ಪೊಡಮಟ್ಟು ॥ ವನಜನಾಭನ ಪದವನಪ್ಪುತ । ಘನತರದ ಭಕ್ತಿಯಲಿ ಪೇಳ್ದನು । ಜನಪರೊಳಗಿನ್ನೇಸು ಧನ್ಯನೊ ಧರ್ಮನಂದನನು ॥ ೧ ॥ ಜಲಜನಾಭನೆ ನಿನ್ನ ಮಹಿಮೆಯ । ನೆಲೆಯ ಬಲ್ಲವರಾರು ತ್ರಿಜಗದಿ । ಸಲಹಿಕೊಂಡೈ ನಮ್ಮ ಬಿಡದೀ ಬಂದ ಹರಿಬದಲಿ ॥ ಹಲವು ಪೇಳುವುದೇನೆನಲು ಹರಿ । ಯಲಘುಭಾಷಾ ಕಲ್ಪವೃಕ್ಷವು । ಫಲವು ಬಂತೆಂದೆಲ್ಲರುರೆ ಸೇರಿದರು ಬೀಡಿಗೆಯು ॥ ೨ ॥

ರಾಗ ಧವಳಾರ ತ್ರಿವುಡೆತಾಳ

ಸರಸಿಜಲೋಚನ ಭವವಿಮೋಚನ । ಸರಸಿಜಭವಭವನುತಿಪಾತ್ರ । ವರ ಸಾರ್ವಭೌಮ ಗುಣಧಾಮ ॥ ಗುಣಧಾಮನೆ ಬಾ ಬಾರೆನುತಲಿ । ತರುಣಿಯರಾರತಿಯ ಬೆಳಗಿರೆ ॥ ಶೋಭಾನೆ ॥ ೧ ॥ ಯಮರಾಜನ ಸುಕುಮಾರಕನಿಗೆ । ಕ್ಷಮೆದಮೆಯಲಿ ಧರ್ಮದಿ ನಡೆವಗೆ । ಕುಮತಿವರ್ಜಿತಗೆ ಸುಮನಸಗೆ ॥ ಸುಮನಸಗಾ ಧರ್ಮರಾಯನಿಗೆ । ವಿಮಲೆಯರಾರತಿಯ ಬೆಳಗಿರೆ ॥ ಶೋಭಾನೆ ॥ ೨ ॥ ಸುಗುಣದೋರ್ದಂಡಗೆ ಚಂಡಗೆ । ಹಗೆಯರ ಸದೆಬಡೆವ ಉದ್ದಂಡಗೆ । ಝಗಝಗಿಪ ಭೀಮ ಸುಗುಣಗೆ ॥ ಸುಗುಣಗೆ ಶ್ರೀಕೃಷ್ಣಾದ್ವೈತಗೆ । ಮುಗುದೆಯರಾರತಿಯ ಬೆಳಗಿರೆ ॥ ಶೋಭಾನೆ ॥ ೩ ॥ ಗಾಂಡೀವಧಾರಗೆ ಧೀರಗೆ । ಚಂಡವಿಕ್ರಮನಿರುಪಮಗೆ । ಭಂಡ ಸೈಂಧವನ ಗೆಲಿದವಗೆ ॥ ಗೆಲಿದಾ ಧುರಧೀರಗೆ ಪಾರ್ಥಗೆ । ಕುಂಡಲದಾರತಿಯ ಬೆಳಗಿರೆ ॥ ಶೋಭಾನೆ ॥ ೪ ॥ ಭೂಪನ ಮೋಹದ ಸೋದರ

ಳಿಗೆ । ವ್ಯಾಪಿಸಿ ಮೂದ್ರಿಗೆ ಜನಿಸಿದ ಸುಕ । ಲಾಪ ನಕುಲಾಂಕಗೆ ಸಹದೇವಗೆ ॥ ಸಹದೇವಗೆ ಜಯು ಜಯುವೆನುತಲಿ । ದ್ರೌಪದಿಯುರಾರತಿಯ ಬೆಳಗಿರೆ ॥ ಶೋಭಾನೆ ॥ ೫ ॥

ಭಾಮಿನಿ

ಅರಸ ಕೇಳಿಂತುತ್ಸವದಿ ಮುರ । ಹರನ ಸಭೆಯುಲಿ ಪಾಂಡುಪುತ್ರರು । ಮೆರೆದರವರಿನ್ನೇನು ಧನ್ಯರೊ ಮೂರು ಲೋಕದಲಿ ॥ ಗುರುಕುಲೋತ್ತಮ ಮಧ್ವಪತಿ ಶ್ರೀ । ವರದ ಕೃಷ್ಣನ ಕರುಣದ ಕವಚವ । ಧರಿಸಿದವರಿಗದೇನು ದೊಡ್ಡಿತೊ ಭೂಪ ಕೇಳೆಂದ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅರಿಯೆನಖಿಳ ಪುರಾಣಶಾಸ್ತ್ರದ । ನೆರವಿಯನು ಶರಪುರದ ಗಣಪತಿ । ವರನಿರೂಪದಿ ವರ್ಣಿಸಿದೆನಿದ । ನರಿವ ತೆರದಿ ॥ ೧ ॥ ಕೇಳಿ ತಪ್ಪಿರೆ ತಿದ್ದುವುದು ಗುಣ । ಶೀಲ ಕವಿಗಳು ಜಗದಿ ಸರ್ವಜ್ಞ । ನಾಳಿ ಕೇಳಿಯೆ ಮೆರೆಸುವುದು ಹರಿ । ಲೀಲೆಗಳನು ॥ ೨ ॥ ಇದು ಸಮಸ್ತಾಘೌಘಪರಿಹರ । ವಿದು ಕಣಾ ಇಹಪರಕೆ ಶುಭಕರ । ವಿದು ಮುಕುಂದನ ಪರಮಲೀಲಾ । ಸುಧೆಯು ಜಗಕೆ ॥ ೩ ॥ ಮಧ್ವಮುನಿಯ ವರಪ್ರಸಾದದ । ಸಿದ್ಧಿಯುಲಿ ವಿರಚಿಸಿದೆ ಕಥೆಯನು । ಹೊದ್ದದಿದರೊಳು ಕಲ್ಮಷವು ಹರಿ । ಸಿದ್ಧಮಂತ್ರ ॥ ೪ ॥ ಭಕ್ತಿಯುಲಿ ಬರೆದೋದಿ ಕೇಳ್ವರ । ಭಕ್ತಜನರ ಮನೋರಥಂಗಳ । ಶಕ್ತನಹ ಶರಪುರದ ಗಣಪತಿ । ಯಿತ್ತು ಪೊರೆವ ॥ ೫ ॥

ರಾಗ ಮುಖಾರಿ ಝಂಪೆತಾಳ

ಜಯ ಮಂಗಳಂ । ನಿತ್ಯ । ಶುಭ ಮಂಗಳಂ ॥ ಪ ॥ ಮಂಗಳಂ ಮತಿ ಭಾಗ್ಯದಾಯಕ ವಿನಾಯಕಗೆ । ಮಂಗಳಂ ಸಿದ್ಧಚಾರಣಸೇವ್ಯಗೆ ॥ ಮಂಗಳಂ ಶರಪುರದ ಶ್ರೀಮಹಾಗಣಪತಿಗೆ । ಮಂಗಳಂ ಶರಭಲಿಂಗೇಶ್ವರನಿಗೆ ॥ ಜಯ ಮಂಗಳಂ ॥ ೧ ॥ ಉದಧಿಲಂಘಿಸಿದವಗೆ ಮಹವಜ್ರಕಾಯನಿಗೆ । ಸದಮಲದಿ ಜನಕಜೆಗೆ ವಂದಿಸಿದಗೆ ॥ ಅಧಮ ರಾವಣನ ಲಂಕೆಯ ಪಿತನ ಸಖಗಿತ್ತ । ಕದನಕಲಿಗಳ ದೇವ ಹನುಮಂತಗೆ ॥ ಜಯ ಮಂಗಳಂ ॥ ೨ ॥ ಶರದಿಂದುಭಾಸಿನಿಗೆ । ಶರಣಜನಪೋಷಿಣಿಗೆ । ವಿರುಪ ಭೃಂಗಾಳಕಿಗೆ ಗುಣಪೂರ್ಣೆಗೆ ॥ ಸರಸಿಜಾಸನನ ಪಟ್ಟದರಾಣಿ ಶಾರದೆಗೆ । ಶರದವಾಹನಮುಖ್ಯ ಸುರನಮಿತೆಗೆ ॥ ಜಯ ಮಂಗಳಂ ॥ ೩ ॥ ಪಶ್ಚಿಮ [illegible]ಬುಧಿಯ ತಡಿಯುಲಿ

ಬಿಂದ ಮೂರುತಿಗೆ । ನಿಶ್ಚಯದ ಶೌರಿ ಪೂಜೆಯ ಕೊಂಬಗೆ ॥ ಅ-
ಮಹಿಮನಿಗೆ ಆನಂದಭರಿತನಿಗೆ । ಸಚ್ಚಿಂತ ಮಧ್ವಪತಿ ಶ್ರೀಕೃಷ್ಣ
ಜಯ ಮಂಗಳಂ । ನಿತ್ಯ । ಶುಭ ಮಂಗಳಂ ॥ ೪ ॥

ಕಂದ

ಶ್ರೀಕೃಷ್ಣಾಚಾರ್ಯನಿಶಾಂತದೊ । ಳೀ ಕೃತಿಯನು ಮುದ್ರಿಸುತ್ತಲಿ ಪ್ರಕ-
ಟಿದೆನು ॥ ಪ್ರಾಕೃತಭಾಷಾಭಿಜ್ಞರ್ । ಸ್ವೀಕೃತವನು ಗೆಯ್ದು ಮುದ-
ವಾಂತಸಲನಿಶಂ ॥ ೧ ॥

ಯಕ್ಷಗಾನ ಸೈಂಧವನ ವಧೆ ಮುಗಿದುದು

॥ ಶ್ರೀಕೃಷ್ಣಾರ್ಪಣಮಸ್ತು ॥



ಪಾವಂಜೆ ಗುರುರಾವ್ ಅಂಡ್ ಸನ್ಸ್ ಇವರಿಂದ ಉಡುಪಿ ಶ್ರೀಕೃಷ್ಣ ಮುದ್ರಣಾಲಯದಲ್ಲಿ
ಮುದ್ರಿಸಲ್ಪಟ್ಟು ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಲ್ಲಿ ಪ್ರಕಟಿಸಲ್ಪಟ್ಟಿತು.
ಶಾ. ೪೮. ೧೮೭೩. 2,000-10-1950